ಬಾ ಮತ್ತು ಬಾಪು 150ನೇ ವರ್ಷಾಚರಣೆ - ಪುಸ್ತಕ ಮಾಲಿಕೆ

ಸತ್ಯ

ಮೋಹನದಾಸ್ ಕರಮಚಂದ್ ಗಾಂಧಿ



ಕನ್ನಡಕ್ಕೆ ಅನುವಾದ : ಜಿ. ಆರ್. ಪಾಂಡೇಶ್ವರ

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಸತ್ಯ

ಮೋಹನದಾಸ್ ಕರಮಚಂದ್ ಗಾಂಧಿ

ಅನುವಾದಕರು

ಜಿ. ಆರ್. ಪಾಂಡೇಶ್ವರ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು - 560001, ದೂರವಾಣಿ : 080-22261967

SATHYA
Written by **M. K. Gandhi**
Translated by **G. R. Pandeshwar,**
Published by **Karnataka Gandhi Smaraka Nidhi**
Gandhi Bhavana, Kumara Park East
Bengaluru - 560001
Phone : 080-22261967

ಮೊದಲ ಮುದ್ರಣ	:	1969
ಎರಡನೆಯ ಮುದ್ರಣ	:	2008
ಪರಿಷ್ಕೃತ 3ನೇ ಆವೃತ್ತಿ	:	2018
ಪ್ರತಿಗಳು	:	5000
ಪುಟಗಳು	:	XII + 63
ಬೆಲೆ	:	38/-
ಮುದ್ರಕರು	:	ಕ್ರಿಯೇಟಿವ್‌ಗೀಕ್ಸ್ ಯಾಧವ ಕಾಲೇಜು ರಸ್ತೆ, ಮಾಧವನಗರ ಬೆಂಗಳೂರು – 560001 ದೂರವಾಣಿ : 080 409270



ಅರ್ಪಣೆ

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ
ಮಾಜಿ ಗೌ.ಕಾರ್ಯದರ್ಶಿಗಳಾದ

ಶ್ರೀ ಸಿದ್ಧವನಹಳ್ಳಿ ಕೃಷ್ಣ ಶರ್ಮ ಅವರಿಗೆ
ಗೌರವಪೂರ್ವಕವಾಗಿ

"ಜೀವನವೆಂಬುದೊಂದು ಆಕಾಂಕ್ಷೆ. ಸಿದ್ಧಿ ಮತ್ತು ಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಉಚ್ಚ ಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ"

– ಮಹಾತ್ಮ ಗಾಂಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು 150ನೇ ವರ್ಷಾಚರಣೆಯ ಸಂದರ್ಭದಲ್ಲಿ ಪರಿಷ್ಕೃತ ಆವೃತ್ತಿಯಲ್ಲಿ ಗಾಂಧೀಜಿ ಅವರ 'ಸತ್ಯ' ಕೃತಿಯನ್ನು ಪ್ರಕಟಗೊಳಿಸಲು ಹರ್ಷವಾಗುತ್ತದೆ.

ಜಗತ್ತಿನಲ್ಲಿ ಸತ್ಯ ಮತ್ತು ಅಹಿಂಸೆಯ ಕುರಿತು ಯಾರಾದರೂ ಅಧ್ಯಯನ, ಸಂಶೋಧನೆ ಮತ್ತು ಸ್ವಯಂ ಅನುಭವಜನ್ಯವಾಗಿ ಮಾಡಿಕೊಂಡವರಿದ್ದಾರೆ ಅಂದರೆ ಅವರು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರಲ್ಲದೆ ಬೇರಾರು ಅಲ್ಲ.

ಅವರು 'ಸತ್ಯವೇ ದೇವರು' ಎಂದರು ಮತ್ತು ಅವರ ಆತ್ಮಕಥನವೇ "ನನ್ನ ಸತ್ಯಾನ್ವೇಷಣೆ" ಎಂಬುದಾಗಿದೆ. ಆಜೀವ ಪರ್ಯಂತ, ಸತ್ಯದೊಂದಿಗೆ ಬದುಕುತ್ತಾ, ಸತ್ಯವನ್ನೇ ಉಸಿರಾಗಿಸಿಕೊಂಡವರು.

ಗಾಂಧೀಜಿ ಅವರು ಪತ್ರಿಕೆಗಳಲ್ಲಿ, ಭಾಷಣಗಳಲ್ಲಿ, ಬರೆಹಗಳಲ್ಲಿ ಸತ್ಯದ ಕುರಿತಾಗಿ ವಿಶ್ಲೇಷಿಸಿದ, ಜೀವನ ಧರ್ಮವಾಗಿಸಿಕೊಂಡ, ವಿವೇಚಿಸಿಕೊಂಡ ಸತ್ಯದ ವ್ಯಾಖ್ಯಾನಗಳನ್ನು ಜಿ.ಆರ್. ಪಾಂಡೇಶ್ವರ ಅವರು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿಯನ್ನು ಪ್ರಥಮವಾಗಿ ಪ್ರಕಟಿಸಲು ಶ್ರಮಿಸಿದ ಗಾಂಧೀ ಭವನದ ಪ್ರಥಮ ಅಧ್ಯಕ್ಷರಾದ ಆರ್.ಎಸ್. ಹುಕ್ಕೇರಿಕರ್ ಅವರಿಗೂ ಹಾಗೂ ದ್ವಿತೀಯ ಮುದ್ರಣವನ್ನು ಪ್ರಕಟಿಸಿದ ಗಾಂಧೀ ಭವನದ ನಿಕಟಪೂರ್ವ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರಿಗೂ ಗೌರವಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ಪರಿಷ್ಕೃತ ಆವೃತ್ತಿಯನ್ನು ಹೊರತರಲು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಗೌ.ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೂ ಮತ್ತು

ಪುಸ್ತಕ ಪ್ರಕಟಣೆಯಲ್ಲಿ ಸಹಕರಿಸುತ್ತಿರುವ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲ ಸದಸ್ಯರಿಗೆ ಹೃತ್ಪೂರ್ವಕ ವಂದನೆಗಳು.

ಈ ಪುಸ್ತಕವನ್ನು ಸೊಗಸಾಗಿ ಮುದ್ರಿಸಿ, ಅರ್ಥಪೂರ್ಣ ಮುಖಪುಟ ವಿನ್ಯಾಸಗೊಳಿಸಿದ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಮತ್ತು ತಂಡದವರಿಗೆ ಗಾಂಧೀ ಭವನದ ಪರವಾಗಿ ನಮನಗಳು ಸಲ್ಲುತ್ತವೆ.

ಬೆಂಗಳೂರು
ಜುಲೈ 25, 2018

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಮೊದಲ ಮಾತು

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು. ನಡೆದಲ್ಲಿ ಪವಿತ್ರ ಭೂಮಿಯಾಯಿತು. ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿಯ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವು ತೋರಿದ ದಾರಿಯನ್ನು ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ಗಾಂಧೀಜಿಯವರ ವಿಚಾರಗಳನ್ನು ಈ ರೀತಿ ಜನತೆಯ ಮುಂದಿಡುವ ದೃಷ್ಟಿಯಿಂದ ಗಾಂಧಿ ಸ್ಮಾರಕ ನಿಧಿಯವರು ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಗಾಂಧಿ ಸಾಹಿತ್ಯವನ್ನು ಭಾಷಾಂತರಿಸಿ ಪೂರೈಸುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಇಂಥ ಅನೇಕ ಪ್ರೌಢ ಪ್ರಕಟಣೆಗಳಾಗಿವೆ.

ಹೆಚ್ಚು ಸರಳವಾದ ಭಾಷೆಯಲ್ಲಿ ಗಾಂಧಿ ಸಾಹಿತ್ಯವನ್ನು ಒದಗಿಸುವ ದೃಷ್ಟಿಯಿಂದಲೂ, ಇಂಥ ಪ್ರಕಟಣೆಗಳು ಹಣ ಮತ್ತು ಆಕಾರಗಳ ದೃಷ್ಟಿಯಿಂದ ಹೆಚ್ಚು ಸಂಗ್ರಹಾನುಕೂಲವಾಗಿರುವಂತೆಯೂ ಇನ್ನೂ ಎರಡು ಆಕಾರಗಳಲ್ಲಿ ಗಾಂಧಿ ಸಾಹಿತ್ಯವನ್ನು ಪ್ರಕಟಿಸುವುದೆಂದು ನಿರ್ಧರಿಸಿತು. ಈ ಗ್ರಂಥಗಳ ಉದ್ದೇಶ ಗಾಂಧಿ ತತ್ತ್ವಜ್ಞಾನ ಇಲ್ಲವೆ ಸಾಹಿತ್ಯದ ಮೌಲ್ಯಮಾಪನವಾಗಿರದೆ, ಭಿನ್ನ ಭಿನ್ನ ವಿಷಯಗಳ ಬಗೆಗೆ ಗಾಂಧೀಜಿ ಅವರು ಹೇಳಿದ ಮಾತುಗಳನ್ನು ತದ್ವತ್ತಾಗಿ ಭಾಷಾಂತರಿಸಿ ಕೊಡುವುದೇ ಆಗಿದೆ. ಪ್ರಸ್ತುತ ಗ್ರಂಥವು ಗಾಂಧೀಜಿಯವರ ಆತ್ಮಕಥೆಯ ಭಾಷಾಂತರವಾಗಿದೆ. ಗಾಂಧೀಜಿ ರಾಷ್ಟ್ರದ ಸೊತ್ತು. ರಾಷ್ಟ್ರೀಯ ಪರಂಪರೆಯಾದ ಅವರ ಜೀವನ ಪ್ರಭಾವವು ಗಾಢವಾಗಿ ಆಗಬೇಕಾದರೆ, ಎಳೆಯ ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಗಾಂಧಿ ಚರಿತ್ರೆಯನ್ನು ಅರಿತಿರಬೇಕು. ಎಳೆಯ ವಯಸ್ಸಿನ ಮಕ್ಕಳಿಗೆ ಹಿಡಿಯುವಂತೆ ತೀರ ಸರಳವಾದ ಮಕ್ಕಳ ಭಾಷೆಯಲ್ಲಿಯೇ ಈ ಅನುವಾದವನ್ನು ಒದಗಿಸಿ ಕೊಡಲಾಗಿದೆ.

ಈ ಪ್ರಕಟಣೆಗಳಲ್ಲಿಯ ಮೊದಲಿನ ಮಾಲಿಕೆಯಲ್ಲಿ ಹೆಚ್ಚು ಸರಳವಾದ ಪ್ರತಿಪಾದನೆಯ ಕಡೆಗೆ ಲಕ್ಷ್ಯವನ್ನು ಪೂರೈಸಿದ್ದರೆ ಜೇಬಿನಾವೃತ್ತಿಯಲ್ಲಿ ಆ ವಿಷಯಗಳ ಬಗೆಗೆ ಗಾಂಧೀ ವಿಚಾರ ಸಾರವು ನೆನಪಿನಲ್ಲಿ ಉಳಿಯುವಂತೆ ಸೂತ್ರಬದ್ಧವಾಗಿ ವಿಷಯಗಳನ್ನು ಕೊಡಲಾಗಿದೆ.

ಮೊದಲಿನ 'ಜನಪ್ರಿಯ' ಆವೃತ್ತಿಯಲ್ಲಿ ಈಗಾಗಲೇ "ಮಹಿಳೆಯರು", "ಒಳ್ಳೆಯ ಜೀವನ", "ಅಸ್ಪೃಶ್ಯತೆ" ಎಂಬ ಪುಸ್ತಕಗಳು ಪ್ರಕಟವಾಗಿವೆ.

ಶಿಕ್ಷಣ ಮತ್ತು ಇತರ ವಿಧಾಯಕ ಕಾರ್ಯಕ್ಷೇತ್ರಗಳಲ್ಲಿ ಇಂದು ಗಾಂಧಿ ವಿಚಾರದ ತಿಳುವಳಿಕೆ ಮತ್ತು ಅನುಷ್ಠಾನದ ಅವಶ್ಯಕತೆ ಎಷ್ಟಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಯಸ್ಕರ ಶಿಕ್ಷಣ ಸಂಸ್ಥೆಗಳು, ಹಳ್ಳಿ ಮತ್ತು ಪಟ್ಟಣಗಳಲ್ಲಿಯ ವಾಚನಾಲಯಗಳು ಮತ್ತು ವಿಧಾಯಕ ಕಾರ್ಯಕರ್ತರು ಈ ಪ್ರಕಟಣೆಗಳನ್ನು ಸ್ವಾಗತಿಸುವುದಾಗಿ ನಂಬಿದ್ದೇವೆ.

ಆರ್.ಎಸ್. ಹುಕ್ಕೇರಿಕರ್

ವಿದ್ಯಾಗಿರಿ
ಧಾರವಾಡ

ಅಧ್ಯಕ್ಷರು
ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ

ಪ್ರಕಾಶಕರ ಮಾತು

ಗಾಂಧಿ ತತ್ತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ. ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ.

ಈ ಕೃತಿ ಮೊದಲು ಮುದ್ರಣವಾದದ್ದು 1960ರ ಗಾಂಧೀಜಯಂತಿ ಸಂದರ್ಭದಲ್ಲಿ 5000 ಕೃತಿಗಳನ್ನು ಮುದ್ರಿಸಲಾಗಿತ್ತು. ಆ ಕೃತಿಗಳು ಮುಗಿದುಹೋಗಿರುವುದರಿಂದ ಈ ಕೃತಿಯನ್ನು ಪುನರ್‌ಮುದ್ರಣ ಮಾಡಲಾಯಿತು. ಸತ್ಯವೆಂಬ ಪದವು ಸತ್ ಅಂದರೆ ಇರುವಿಕೆ ಎಂಬ ಧಾತುವಿನಿಂದ ಬಂದದ್ದು, ವಸ್ತುತಃ ಸತ್ಯವನ್ನು ಬಿಟ್ಟು ಯಾವುದೂ ಇಲ್ಲ ಇರುವುದೂ ಇಲ್ಲ. ಆದ್ದರಿಂದ ದೇವರ ನಾಮಗಳಲ್ಲಿ ಸತ್ಯವೇ ಅತ್ಯಂತ ಪ್ರಮುಖವಾದದ್ದಾಗಿ ತೋರುತ್ತದೆ. ವಾಸ್ತವಿಕವಾಗಿ ಹೇಳುವುದಾದರೆ, ದೇವರೇ ಸತ್ಯ ಎನ್ನುವುದಕ್ಕಿಂತ ಸತ್ಯವೇ ದೇವರು ಹೆಚ್ಚು ಸಮರ್ಪಕವಾಗುವುದು. ನಾವೆಲ್ಲರು, ಸಣ್ಣವರಿರಲಿ, ದೊಡ್ಡವರಿರಲಿ, ಹೆಂಗಸರಿರಲಿ, ಗಂಡಸರಿರಲಿ ನಮ್ಮ ಜಾಗೃತಾವಸ್ಥೆಯಲ್ಲಿ ಮಾಡುವ ಸಕಲ ಕರ್ಮಗಳಲ್ಲಿಯೂ, ಉಣ್ಣುವಾಗ, ತಿನ್ನುವಾಗ, ಆಡುವಾಗ ಸಂಪೂರ್ಣವಾಗಿ ಸತ್ಯಕ್ಕೆ ಅಂಟಕೊಂಡೇ ಇರಬೇಕು. ಈ ದೇಹ ಬಿದ್ದು ನಾವು ಸತ್ಯದೊಂದಿಗೆ ಬೆರೆಯುವವರೆಗೂ ಸತ್ಯದಿಂದ ನಡೆದುಕೊಂಡರೆ ಎಷ್ಟು ಒಳ್ಳೆಯದಾಗುವದು. ದೇವರು ಸತ್ಯದ ರೂಪದಲ್ಲಿಯೆ ನನಗೆ ದೊರೆತಿರುವ ಒಂದು ಅಮೂಲ್ಯ ನಿಧಿಯಾಗಿದೆ. ನಮ್ಮಲ್ಲಿಯ ಪ್ರತಿಯೊಬ್ಬನಿಗೂ ಸತ್ಯ ಅಂತಹ ನಿಧಿಯಾಗಿರಲಿ. ಸತ್ಯನಿಷ್ಠನಾದವನು ಲೋಕಾರೂಢಿಗೆ ಕಟ್ಟುಬಿದ್ದು ಯಾವುದನ್ನೂ ಕೈಗೊಳ್ಳಲಾರನು. ಆತನು ಯಾವಾಗಲೂ ತನ್ನನ್ನು ತಿದ್ದಿಕೊಳ್ಳಲು ಸಿದ್ಧನಾಗಿರಬೇಕು ಮತ್ತು ತನ್ನ ತಪ್ಪನ್ನು ಕಂಡುಕೊಂಡೊಡನೆಯೇ ಆತನು ಅದನ್ನು ಬಯಲಿಗಿಟ್ಟು, ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಈ ಕೃತಿಯಲ್ಲಿ ಸತ್ಯ–ಮೌನ ಮತ್ತು ಸತ್ಯ ಮತ್ತು ವಿಶ್ವ, ಪ್ರೇಮ, ಸತ್ಯ ಮತ್ತು ಅಹಿಂಸೆ, ಸತ್ಯ ಮತ್ತು ಪ್ರಜಾಸತ್ತೆ, ಸತ್ಯವೇ

ದೇವರು, ಸತ್ಯಪಥ, ಸತ್ಯ ಮತ್ತು ನಿಸ್ವಾರ್ಥತೆ, ಸತ್ಯ ಮತ್ತು ಅರ್ಥಶಾಸ್ತ್ರ, ಸತ್ಯ–ರಾಜಕೀಯ, ಸತ್ಯ–ಮತಧರ್ಮ, ಸತ್ಯ–ಅಸ್ತೇಯ, ಸತ್ಯ–ಅಸಂಗ್ರಹ ಮತ್ತು ಸತ್ಯ–ಬ್ರಹ್ಮಚರ್ಯ, ಸತ್ಯ–ಕರ್ಮಫಲ, ಸತ್ಯಸ್ವರೂಪ, ಸತ್ಯದ ವಿಶ್ವರೂಪ, ಸತ್ಯ–ಪ್ರಾರ್ಥನೆ, ಸತ್ಯ–ಶಿಷ್ಟಾಚಾರ, ಸತ್ಯ–ಪ್ರೇಮ, ಸತ್ಯ–ಮಿತಾಹಾರ, ಸತ್ಯ–ಕಲೆ ಸತ್ಯ ಮತ್ತು ಸ್ವದೇಶಿ ಬಗ್ಗೆ ಗಾಂಧೀಜಿ ತಮ್ಮ ನುಡಿಗಳಲ್ಲಿ ಹೇಳಿದ್ದಾರೆ.

ಇಂತಹ ಕೃತಿಯನ್ನು, ಮಹಿಳೆಯರು ಮತ್ತು ಯುವ ಜನತೆಗೆ ತಲುಪಿಸಲು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮಹತ್ವದ ಕಾರ್ಯವನ್ನು ಕೈಗೊಂಡಿದೆ. ಈ ಕೃತಿ ಯುವ ಜನತೆಗೆ ಮಾರ್ಗದರ್ಶಿಯಾಗುವುದರಲ್ಲಿ ಸಹಕಾರಿಯಾಗುತ್ತದೆ. 1960ರಲ್ಲಿ ಈ ಕೃತಿಯನ್ನು ಪ್ರಕಟಿಸಿ ಮಹಾತ್ಮರ ಅಭಿಪ್ರಾಯಗಳನ್ನು ಜನರಲ್ಲಿ ಪರಿಚಯಿಸಿದ ಅಂದಿನ ಸ್ಮಾರಕ ನಿಧಿಯ ಅಧ್ಯಕ್ಷರು ಹಾಗೂ ಅಂದಿನ ಪ್ರಕಟಣಾ ಸಲಹಾ ಸಮಿತಿಯ ಸದಸ್ಯರೆಲ್ಲರ ಅಭಿಪ್ರಾಯವನ್ನು ನಾನು ನೆನೆಯುತ್ತೇನೆ.

ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ಈ ಕೃತಿ ಕರಡು ತಿದ್ದುಪಡಿ ಮಾಡಿದ ಪ್ರೊ. ಜಿ. ಅಶ್ವಥ್‌ನಾರಾಯಣ ಹಾಗೂ ಶ್ರೀಮತಿ ಎಂ. ಆರ್. ಲಕ್ಷ್ಮೀದೇವಿ ದಂಪತಿಗಳಿಗೂ ನನಗೂ ಈ ಕೃತಿಗೆ ಅಂದವಾಗಿ ಮುಖಪುಟ ರಚಿಸಿಕೊಟ್ಟ ಡಾ॥ ಬಸವರಾಜ ಪಾಟೀಲ್ ಅವರಿಗೂ ಮತ್ತು ಅಂದವಾಗಿ ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಮೆ॥ ಲಿಬರ್ಟಿ ಎಂಟರ್‌ಪ್ರೈಸಸ್ ಮಾಲೀಕರಾದ ಶ್ರೀಯುತ ಶಿವದೇವ ಅವರಿಗೂ ಧನ್ಯವಾದಗಳು ಸಲ್ಲುತ್ತವೆ.

ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
1985 ರಿಂದ 2017
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಪರಿವಿಡಿ

ಸತ್ಯ

ಸತ್ಯೋಪಾಸಕನ ಅರ್ಹತೆಗಳು

ನಾನೊಬ್ಬ ಏಕನಿಷ್ಠ ಸತ್ಯಶೋಧಕ. ಸತ್ಯದ ಶೋಧನೆಗೆ ನಾನೊಂದು ಹಾದಿ ಹಿಡಿದಿದ್ದೇನೆ. ಸತ್ಯಶೋಧನೆಯಲ್ಲಿಯೇ ನಾನು ಸದಾ ನಿರತನಾಗಿರುವೆನು; ಆದರೂ ನಾನಿನ್ನೂ ಸಿದ್ಧಿಹೊಂದಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಸತ್ಯವನ್ನು ಸಂಪೂರ್ಣವಾಗಿ ಅರಿತುಕೊಳ್ಳಲಿಚ್ಛಿಸುವವನು ತನ್ನನ್ನೂ ತನ್ನ ಸಕಲ ಕರ್ಮಗಳನ್ನೂ ಸರಿಯಾಗಿ ವಿಮರ್ಶಿಸಿ ತಿಳಿದುಕೊಳ್ಳುವಂತಾಗಬೇಕು. ಅಂದರೆ, ಆತನಲ್ಲಿ ಯಾವ ದೋಷವೂ ಇರದಂತಾಗಬೇಕು. ನನ್ನ ದೋಷಗಳನ್ನು ನಾನು ಚೆನ್ನಾಗಿ ಬಲ್ಲೆನು; ಅದೇ ನನ್ನ ಶಕ್ತಿಯ ಮೂಲವಾಗಿದೆ. ಯಾಕೆಂದರೆ, ತನ್ನ ಶಕ್ತಿಯ ಆಳವು ಎಷ್ಟೆಂಬುದನ್ನು ತಿಳಿದುಕೊಳ್ಳುವುದರಲ್ಲಿಯೇ ವ್ಯಕ್ತಿಯ ಹಿರಿಮೆ ಇದೆ.

(ಯ.ಇ., 17–11–1921)

ಹೊಸ ಧರ್ಮಪಂಥವನ್ನು ಸ್ಥಾಪಿಸುವ ಇಚ್ಛೆ ನನಗಿಲ್ಲ. ಏಕೆಂದರೆ ನಾನು ಯಾವ ಹೊಸ ಸತ್ಯವನ್ನೂ ಪ್ರತಿನಿಧಿಸುತ್ತಿಲ್ಲ; ಯಾವುದನ್ನು ನಾನು ಸತ್ಯವೆಂದು ಅರಿತುಕೊಂಡಿರುವೆನೋ ಅದನ್ನೇ ಅನುಸರಿಸುತ್ತ, ಅದರ ಪ್ರತಿನಿಧಿಯಾಗಿ ನಡೆದುಕೊಳ್ಳಲು ಯತ್ನಿಸುತ್ತಿದ್ದೇನೆ. ಆದರೂ ಅನೇಕ ಹಳೆಯ ಸತ್ಯಗಳ ವಿಷಯವಾಗಿ ಹೊಸ ಬೆಳಕನ್ನು ಬೀರುತ್ತಿದ್ದೇನೆಂದು ಮಾತ್ರ ಪ್ರತಿಪಾದಿಸುತ್ತೇನೆ.

(ಯ.ಇ., 25–8–1921)

* * *

ಈಗ ನಾನು ಬರೆಯುತ್ತಿರುವ ವಿಷಯದ ಬಗೆಗೆ ಹಿಂದೆ ಏನು ಬರೆದಿದ್ದೆನೆಂಬುದರ ಗೊಡವೆಗೇ ನಾನು ಹೋಗುವುದಿಲ್ಲ. ಏಕೆಂದರೆ, ಯಾವುದಾದರೊಂದು ವಿಷಯವು ನನ್ನ ಮುಂದೆ ಬಂದಾಗ, ಅದರ ಕುರಿತು ಹಿಂದೆ ಹೇಳಿದ್ದಕ್ಕೆ ವಿರೋಧವಾಗದಂತೆ ಈಗ ಹೇಳಬೇಕು–ಎಂಬುದು

ನನ್ನ ಉದ್ದೇಶವಲ್ಲ. ಆದರೆ ಆಯಾ ಕಾಲಕ್ಕೆ ಯಾವುದು ಸತ್ಯವೋ ಅದಕ್ಕೆ ಅವಿರೋಧವಾಗಿರಬೇಕೆಂಬುದೇ ನನ್ನ ಉದ್ದೇಶ. ಇದರ ಪರಿಣಾಮವಾಗಿ, ನಾನು ಸತ್ಯದಿಂದ ಸತ್ಯಕ್ಕೆ ಬೆಳೆಯುತ್ತಲೇ ಬಂದಿದ್ದೇನೆ. ಮತ್ತು ನನ್ನ ಸ್ಮರಣಶಕ್ತಿಯ ಶ್ರಮವನ್ನು ಕಡಿಮೆ ಮಾಡಿಕೊಂಡಿದ್ದೇನೆ. ಅಷ್ಟೇ ಅಲ್ಲ, ಐವತ್ತು ವರ್ಷಗಳ ಹಿಂದೆ ನಾನು ಯಾವುದೊಂದೇ ವಿಷಯದ ಬಗೆಗೆ ಬರೆದಿದ್ದುದನ್ನು ಇಂದಿನದರೊಡನೆ ಹೋಲಿಸಿ ನೋಡಿದಾಗ ಅವುಗಳೊಳಗೆ ಪರಸ್ಪರ ವಿಸಂಗತಿಯೇನೂ ಕಂಡು ಬರಲಿಲ್ಲ. ಆದರೆ ಅವುಗಳೊಳಗೆ ವಿಸಂಗತಿಯನ್ನು ಕಾಣುವ ಮಿತ್ರರು, ಹಿಂದೆ ಬರೆದುದರ ಬದಲಿಗೆ ಇಂದಿನದನ್ನು ಸ್ವೀಕರಿಸಬಹುದು. ಹಾಗೆ ಸ್ವೀಕರಿಸುವ ಮೊದಲು, ಅಂದಿನ ಮತ್ತು ಇಂದಿನ ಮಾತುಗಳ ಅಂತರಾಳದಲ್ಲಿ ಯಾವ ವಿಸಂಗತಿಯಾದರೂ ಇರುವುದೋ ಹೇಗೆಂಬುದನ್ನು ಕಂಡುಹಿಡಿಯಲು ಯತ್ನಿಸಬೇಕು.

(ಹ., 30–9–1939)

ಸತ್ಯ ಎಂದರೇನು?

'ಸತ್ಯ'ವೆಂಬ ಪದವು 'ಸತ್'.ಅಂದರೆ ಇರುವಿಕೆ ಎಂಬ ಧಾತುವಿನಿಂದ ಬಂದದ್ದು. ವಸ್ತುತಃ ಸತ್ಯವನ್ನು ಬಿಟ್ಟು ಯಾವುದೂ ಇಲ್ಲ; ಇರುವುದೂ ಇಲ್ಲ. ಆದ್ದರಿಂದ ದೇವರ ನಾಮಗಳಲ್ಲಿ ಸತ್ಯವೇ ಅತ್ಯಂತ ಪ್ರಮುಖವಾದದ್ದಾಗಿ ತೋರುತ್ತಿದೆ. ವಾಸ್ತವಿಕವಾಗಿ ಹೇಳುವುದಾದರೆ, ದೇವರೇ ಸತ್ಯ ಎನ್ನುವುದಕ್ಕಿಂತ ಸತ್ಯವೇ ದೇವರು ಎನ್ನುವುದೇ ಹೆಚ್ಚು ಸಮರ್ಪಕವಾಗುವುದು.

ಈ ಸತ್ಯವೊಂದೇ ನಮ್ಮ ಇರುವಿಕೆಗೆ ಸಮರ್ಥನೆಯಾಗಿದೆ. ನಮ್ಮ ಸಕಲ ಕರ್ಮಗಳೂ ಸತ್ಯದಲ್ಲೇ ಕೇಂದ್ರಿತವಾಗಿರತಕ್ಕದ್ದು. ಸತ್ಯವೇ ನಮ್ಮ ಬಾಳಿನ ಉಸಿರಾಗಿರಬೇಕು. ಸತ್ಯ ಮಾರ್ಗದಲ್ಲಿ ನಡೆಯುವ ಯಾತ್ರಿಕನಿಗೆ ಈ ನೆಲೆ ಸಿಕ್ಕಿದರೆ ಸಾಕು, ವಿಶೇಷ ಪ್ರಯತ್ನವಿಲ್ಲದೇ ಸದಾಚಾರಗಳೆಲ್ಲವೂ ಬಂದುಬಿಡುತ್ತವೆ; ಈ ನೀತಿ ನಿಯಮಗಳನ್ನು ಪಾಲಿಸಬೇಕೆಂಬ ಬುದ್ಧಿಯೂ ತಾನಾಗಿಯೇ ಹುಟ್ಟಬಿಡುತ್ತದೆ. ಆದರೆ, ಸತ್ಯವನ್ನು ಬಿಟ್ಟರೆ, ಜೀವನದಲ್ಲಿ ಯಾವ ಸದಾಚಾರದ ನೀತಿ ನಿಯಮಗಳನ್ನು ಪಾಲಿಸುವುದೂ ಅಸಾಧ್ಯವಾಗುವುದು.

ಸತ್ಯ ಮಾತಾಡುವುದೊಂದೇ ಸತ್ಯಾರ್ಚನೆ ಎಂಬುದಾಗಿ ಸಾಮಾನ್ಯವಾದ ತಿಳುವಳಿಕೆ ಇದೆ. ಆದರೆ ಆಶ್ರಮವಾಸಿಗಳಾಗಿರುವ ನಾವು ಸತ್ಯದ ವ್ಯಾಪಕಾರ್ಥವನ್ನು ತಿಳಿದುಕೊಳ್ಳತಕ್ಕದ್ದು - ಮನಸ್ಸಿನಲ್ಲಿ ಸತ್ಯ ಇರಬೇಕು, ಮಾತಿನಲ್ಲಿ ಸತ್ಯ ಇರಬೇಕು, ಕೃತಿಯಲ್ಲಿಯೂ ಸತ್ಯವಿರಬೇಕು.

ಸತ್ಯವೇ ದೇವರ ಸರಿಯಾದ ಹೆಸರು. ಆದ್ದರಿಂದ ಪ್ರತಿಯೊಬ್ಬ ಮನುಷ್ಯನೂ ತನ್ನ ಶ್ರದ್ಧೆಗನುಸಾರವಾಗಿ ಸತ್ಯಮಾರ್ಗದಲ್ಲಿ ನಡೆದುಕೊಳ್ಳುವುದು ತಪ್ಪೆನಿಸದು. ಹಾಗೆ ನಡೆದುಕೊಳ್ಳುವುದೇ ಕರ್ತವ್ಯವಾಗುವುದು. ಸತ್ಯಪಥದಲ್ಲಿ ನಡೆಯುವಾಗ ಏನಾದರೂ ತಪ್ಪಾದರೆ, ಅದು ತಾನಾಗಿಯೇ ತಿದ್ದಲ್ಪಡುತ್ತದೆ. ಏಕೆಂದರೆ, ಸತ್ಯಶೋಧನೆಯೊಂದು ತಪಸ್ಸು-ಅದರಲ್ಲಿ ಅನೇಕ ವಿಪತ್ತುಗಳುಂಟಾಗಿ, ಪ್ರಾಣಾರ್ಪಣೆ ಮಾಡುವ ಸಂದರ್ಭವೂ ಬರಬಹುದು. ಅದರಲ್ಲಿ ಸ್ವಾರ್ಥದ ಲವಲೇಶಕ್ಕೂ ಆಸ್ಪದವಿರದು. ಅಂತಹ ನಿಸ್ಪೃಹವಾದ

ಸತ್ಯಶೋಧನೆಯಲ್ಲಿ ತೊಡಗಿದ ಯಾವನೂ ಬಹಳ ಹೊತ್ತು ದಾರಿ ತಪ್ಪಿ ಇರಲಾರನು; ಧ್ಯೇಯಚ್ಯುತನಾಗಿರಲಾರನು.ದಾರಿ ತಪ್ಪಿದೊಡನೆಯೇ ಆತನು ಎಡವಿ ಬಿದ್ದು, ಪುನಃ ಸರಿಯಾದ ದಾರಿಗೇ ಬರುತ್ತಾನೆ. ಆದ್ದರಿಂದಲೇ ಸತ್ಯಶೋಧನೆಯು ನಿಜವಾದ ಭಕ್ತಿಮಾರ್ಗ. ನಮ್ಮನ್ನು ಅದು ದೇವರೆಡೆಗೆ ಒಯ್ಯುವ ದಾರಿ.

ನಾವೆಲ್ಲರೂ – ಸಣ್ಣವರಿರಲಿ ದೊಡ್ಡವರಿರಲಿ, ಹೆಂಗಸರಿರಲಿ, ಗಂಡಸರಿರಲಿ – ನಮ್ಮ ಜಾಗ್ರತಾವ್ಯವಸ್ಥೆಯಲ್ಲಿ ಮಾಡುವ ಸಕಲ ಕರ್ಮಗಳಲ್ಲಿಯೂ – ಉಣ್ಣುವಾಗ, ತಿನ್ನುವಾಗ, ಆಡುವಾಗ– ಸಂಪೂರ್ಣವಾಗಿ ಸತ್ಯಕ್ಕೆ ಅಂಟಿಕೊಂಡೇ ಇರಬೇಕು. ಈ ದೇಹ ಬಿದ್ದು ನಾವು ಸತ್ಯದೊಂದಿಗೆ ಬೆರೆಯುವವರೆಗೂ ಸತ್ಯದಿಂದ ನಡೆದುಕೊಂಡರೆ ಎಷ್ಟು ಒಳ್ಳೆಯದಾಗುವುದು! ದೇವರು ಸತ್ಯದ ರೂಪದಲ್ಲಿಯೇ ನನಗೆ ದೊರೆತಿರುವ ಒಂದು ಅಮೂಲ್ಯ ನಿಧಿಯಾಗಿದ್ದಾನೆ; ನಮ್ಮಲ್ಲಿಯ ಪ್ರತಿಯೊಬ್ಬನಿಗೂ ಆತನು ಅಂತಹ ನಿಧಿಯಾಗಿರಲಿ.

(ಯರವಡಾ ಮಂದಿರ – 1945)

ಸತ್ಯ ಮತ್ತು ಲೋಕರೂಢಿ

ಹೊಸ ಪ್ರಯೋಗ ಮಾಡಲಿಚ್ಛಿಸುವವನು ಮೊಟ್ಟ ಮೊದಲು ತನ್ನ ಜೀವನದಲ್ಲಿಯೇ ಅದನ್ನು ಪ್ರಾರಂಭಿಸಬೇಕು. ಅದು ಬೇಗನೆ ಸತ್ಯದ ಶೋಧನೆ ಮಾಡಿಕೊಡುತ್ತದೆ; ಪ್ರಾಮಾಣಿಕನಾದ ಶೋಧಕನನ್ನು ದೇವರು ಸದಾ ರಕ್ಷಿಸುತ್ತಾನೆ.

(ಆ. ಚ., 1948)

* * *

ಸತ್ಯನಿಷ್ಠನಾದವನು ಲೋಕರೂಢಿಗೆ ಕಟ್ಟುಬಿದ್ದು ಯಾವುದನ್ನೂ ಕೈಗೊಳ್ಳಲಾರನು. ಆತನು ಯಾವಾಗಲೂ ತನ್ನನ್ನು ತಿದ್ದಿಕೊಳ್ಳಲು ಸಿದ್ಧನಾಗಿರಬೇಕು; ಮತ್ತು ತನ್ನ ತಪ್ಪನ್ನು ಕಂಡುಕೊಂಡೊಡನೆಯೇ ಆತನು ಅದನ್ನು ಬಯಲಿಗಿಟ್ಟು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

(ಆ. ಚ., 1947)

ಸತ್ಯ – ಮೌನ

ಸತ್ಯೋಪಾಸಕನಿಗೆ ಮೌನವು ಆಧ್ಯಾತ್ಮಿಕ ಸಾಧನೆಯ ಒಂದಂಗವಾಗಿರುತ್ತದೆಂಬುದನ್ನು ನಾನು ಅನುಭವದಿಂದ ಕಲಿತುಕೊಂಡಿದ್ದೇನೆ. ತಿಳಿದೋ, ತಿಳಿಯದೆಯೋ, ಬದಲು ಮಾಡುವುದೂ ಮನುಷ್ಯನಲ್ಲಿರುವ ಸಾಮಾನ್ಯವಾದ ಒಂದು ದೌರ್ಬಲ್ಯವಾಗಿದೆ; ಆ ದೌರ್ಬಲ್ಯವನ್ನು ಗೆಲ್ಲಲು ಮೌನವು ಅತ್ಯವಶ್ಯಕವಾಗಿದೆ. ಮಿತಭಾಷಿಯಾದವನು ತನ್ನ ಪ್ರತಿಯೊಂದು ಮಾತನ್ನೂ ತೂಗಿ ನೋಡುವನಾದ್ದರಿಂದ, ಆತನ ಮಾತಿನಲ್ಲಿ ಅಲಕ್ಷ್ಯವಾಗಲಿ ತಿಳಿಗೇಡಿತನವಾಗಲಿ ತೀರ ಕಡಿಮೆಯಾಗುವುದು.

(ಆ. ಚ., 1948)

* * *

ನನ್ನಂತಹ ಸತ್ಯೋಪಾಸಕನಿಗೆ ಮೌನವು ಬಹಳ ಸಹಾಯಕವಾಗಿದೆ. ಮೌನಧಾರಣೆಯಲ್ಲಿ ಆತ್ಮಕ್ಕೆ ಸ್ಪಷ್ಟವಾದ ದಾರಿ ತೋರುತ್ತದೆ. ಕೃತ್ರಿಮ ಮತ್ತು ವಂಚನೆಗಳೆಲ್ಲವೂ ಸ್ಫಟಿಕದಂತೆ ಸ್ವಚ್ಛವಾಗಿ ತೋರಿಬಿಡುತ್ತದೆ. ನಮ್ಮ ಜೀವನವು ಸತ್ಯವನ್ನು ಹುಡುಕುವ ಪ್ರಯಾಸಕರವಾದ ದೀರ್ಘಯಾತ್ರೆಯಂತಿದೆ. ಆದ್ದರಿಂದ ಆತ್ಮಕ್ಕೆ ಚೈತನ್ಯದಾಯಕವಾದ ಆಂತರಿಕ ವಿಶ್ರಾಂತಿಯು ಅವಶ್ಯವೆನಿಸುತ್ತದೆ.

(ಹ, 10–12–38)

* * *

ಬಾಲ್ಯದಿಂದಲೂ ನಾನು ಸತ್ಯೋಪಾಸಕನಾಗಿದ್ದೇನೆ. ನನಗೆ ಅದು ಸ್ವಾಭಾವಿಕವಾಗಿ ಬಂದಿದೆ. ನನ್ನ ಧ್ಯಾನ ಮೌನಗಳ ಫಲವಾಗಿ, ದೇವರು ಸತ್ಯ ಎಂಬ ತತ್ವದ ಬದಲು ಸತ್ಯವೇ ದೇವರು ಎಂಬ ತತ್ವವು ನನಗೆ ಸ್ಪಷ್ಟವಾಗಿ ಗೋಚರಿಸಿದೆ.ದೇವರನ್ನು ಪ್ರತ್ಯಕ್ಷವಾಗಿ ಕಾಣಲು ನನಗೆ ಇದರಿಂದ ಅನುಕೂಲವಾಗಿದೆ. ನನ್ನ ಜೀವನದ ಅಣುರೇಣುಗಳಲ್ಲಿಯೂ ದೇವರು ವ್ಯಾಪಿಸಿರುವನೆಂಬುದನ್ನು ನಾನು ಇದರಿಂದಲೇ ಅನುಭವ ಮಾಡಿಕೊಂಡಿದ್ದೇನೆ.

(ಹ., 9–8–42)

ಸತ್ಯ – ವಿಶ್ವಪ್ರೇಮ

ಅಹಿಂಸೆಯು ನನ್ನ ದೇವರು, ಸತ್ಯವೂ ನನ್ನ ದೇವರು. ಅಹಿಂಸೆಯ ಕಡೆಗೆ ತಿರುಗುತ್ತಲೇ "ನನ್ನ ಮೂಲಕವಾಗಿಯೇ ದೇವರನ್ನು ಹುಡುಕು" ಎಂದು ಸತ್ಯವು ಹೇಳುತ್ತದೆ. ಸತ್ಯ ಕಡೆಗೆ ತಿರುಗುತ್ತಲೇ "ನನ್ನ ಮೂಲಕವಾಗಿಯೇ ಹುಡುಕು" ಎಂದು ಅಹಿಂಸೆಯು ಹೇಳುತ್ತದೆ.

(ಯ.ಇ., 4–6–25)

* * *

ಎಲ್ಲವನ್ನೂ ತುಂಬಿಕೊಂಡಿರುವ, ಎಲ್ಲವನ್ನೂ ವ್ಯಾಪಿಸಿರುವ ಆ ಸತ್ಯದ ಆಳವನ್ನು ಕಣ್ಣಾರೆ ಕಾಣಬಯಸುವವನು, ಈ ಸೃಷ್ಟಿಯಲ್ಲಿಯ ಅತ್ಯಲ್ಪವೆನಿಸಿದುದನ್ನು ಕೂಡ ತನ್ನಂತೆಯೇ ಪ್ರೀತಿಸುವ ಶಕ್ತಿಯುಳ್ಳವನಾಗಬೇಕು. ಆಗ ಆತನು ಪ್ರಪಂಚದ ಯಾವ ಕ್ಷೇತ್ರದಿಂದಲೂ ದೂರವಾಗಿರಲು ಸಾಧ್ಯವಾಗದು. ಆದ್ದರಿಂದಲೇ ಸತ್ಯದ ಮೇಲಿರುವ ನನ್ನ ಶ್ರದ್ಧೆಯು ನನ್ನನ್ನು ರಾಜಕೀಯಕ್ಕೆ ಎಳೆದಿದೆ. ಧರ್ಮ ಮತ್ತು ರಾಜಕಾರಣಗಳೊಳಗೆ ಪರಸ್ಪರ ಯಾವ ಸಂಬಂಧವೂ ಇಲ್ಲ ಎಂದು ಹೇಳುವವರಿಗೆ ಧರ್ಮವೆಂದರೇನೆಂಬುದೇ ಗೊತ್ತಿಲ್ಲ. ಈ ಮಾತನ್ನು ನಾನು ಪೂರ್ಣ ನಮ್ರತೆಯಿಂದ, ಘಂಟಾಘೋಷವಾಗಿ ಹೇಳುತ್ತೇನೆ.

ಹಳೆಯದೆಲ್ಲವೂ ಕೆಟ್ಟುದೆಂಬ ಮಾತನ್ನು ನಾನೆಂದೂ ಒಪ್ಪಲಾರೆನು. ಸತ್ಯವು ಹಳೆಯದು ಮತ್ತು ಕಷ್ಟಕರವಾದದ್ದು. ಅಸತ್ಯದಲ್ಲಿ ಆಕರ್ಷಣೆಗಳು ಬಹಳ.ಆದರೆ, ಬಹಳ ಹಳೆಯದಾದ ಸತ್ಯದ ಸ್ವರ್ಣಯುಗಕ್ಕೆ ಆನಂದದಿಂದಲೇ ಮರಳಿ ಹೋಗಲು ಇಚ್ಛಿಸುತ್ತೇನೆ.

(ಯ.ಇ., 2–7–1931)

ಸತ್ಯ ಮತ್ತು ಅಹಿಂಸೆ

ನಶ್ವರವಾದ ಈ ಶರೀರದಲ್ಲಿ ನಾವು ಬಂಧಿತರಾಗಿರುವವರೆಗೆ ಪರಿಪೂರ್ಣ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗದು. ಆ ಪರಿಪೂರ್ಣ ಸತ್ಯವನ್ನು ಭಾವನಾತ್ಮಕವಾಗಿ ಮಾತ್ರವೇ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ಶಾಶ್ವತವಾದ ಸತ್ಯವನ್ನು ಈ ಕ್ಷಣಭಂಗುರವಾದ ದೇಹದ ಮೂಲಕವಾಗಿ ಪ್ರತ್ಯಕ್ಷ ನೋಡಲಾರೆವು. ಆದ್ದರಿಂದಲೇ ನಾವು ಕಟ್ಟಕಡೆಗೆ ಶ್ರದ್ಧೆಗೆ ಶರಣುಹೋಗಬೇಕಾಗುವುದು.

ಈ ನಶ್ವರ ದೇಹದಲ್ಲಿ ಪೂರ್ಣ ಸತ್ಯದ ಸಾಕ್ಷಾತ್ಕಾರವು ಅಸಾಧ್ಯವೆಂದು ತಿಳಿದೇ ಪ್ರಾಚೀನ ಸತ್ಯೋಪಾಸಕನು ಅಹಿಂಸೆಯನ್ನು ಪ್ರಶಂಸಿಸತೊಡಗಿದನೆನ್ನಬಹುದು. ಆತನಿಗೆದುರಾದ ಪ್ರಶ್ನೆ ಇದು– "ನನಗೆ ಕಷ್ಟ ಕೊಡುವವರನ್ನು ತಾಳಿಕೊಳ್ಳಲೆ? ಅಥವಾ, ಅವರನ್ನು ಕೊಂದುಬಿಡಲೆ?" ಅನ್ಯರನ್ನು ಕೊಲ್ಲುತ್ತ ಹೋದ ಶೋಧಕನು ಪ್ರಗತಿಹೊಂದದೆ, ಇದ್ದಲ್ಲಿಯೇ ಇದ್ದಂತಾದಾನು, ಅರ್ಥಾತ್ ಆತನ ಕಷ್ಟಗಳು ಪರಿಹಾರವಾಗಲಿಲ್ಲ; ಆದರೆ, ಕಷ್ಟಕೊಡುವವರನ್ನು ತಾಳಿಕೊಂಡು ನಡೆದವನು ಪ್ರಗತಿ ಹೊಂದಿದನಲ್ಲದೆ ಕೆಲವೊಮ್ಮೆ ಇತರರನ್ನೂ ತನ್ನೊಂದಿಗೆ ಪ್ರಗತಿಗೆ ಒಯ್ದನು. ಈ ವಿನಾಶ ಕೃತ್ಯವು–ತಾನು ಹುಡುಕುತ್ತಿದ್ದ ಸತ್ಯವು ತನ್ನಿಂದ ಭಿನ್ನವಾಗಿರದೆ ತನ್ನೊಳಗೇ ಇದೆ–ಎಂಬ ಪಾಠವನ್ನು ಆತನಿಗೆ ಕಲಿಸಿತು. ಹಾಗಾಗಿ, ಆತನು ಹಿಂಸೆ ಮಾಡುತ್ತ ಹೋದಂತೆ, ಸತ್ಯದಿಂದ ದೂರಾಗುತ್ತ ಹೋದನು. ಕಾರಣವಿಷ್ಟೆ – ತನ್ನಿಂದ ಬೇರೆಯಾಗಿರುವನೆಂಬ ಕಾಲ್ಪನಿಕ ಶತ್ರುವಿನೊಡನೆ ಹೋರಾಡುತ್ತ ಆತನು ತನ್ನೊಳಗಿನ ಶತ್ರುವನ್ನು ಅಲಕ್ಷಿಸಿಬಿಟ್ಟದ್ದನು.

ನಮಗೆ ಹಿಂಸೆ ಕೊಡುತ್ತಾರೆಂದು ನಾವು ಕಳ್ಳರನ್ನು ದಂಡಿಸುತ್ತೇವೆ. ಅವರು ನಮ್ಮನ್ನು ಬಿಟ್ಟುಬಿಟ್ಟು, ಅನ್ಯರಿಗೆ ಹಿಂಸೆ ಕೊಡಲು ಹೋಗುತ್ತಾರೆ. ಹಿಂಸೆಗೊಳಗಾಗುವ ಆ ಅನ್ಯನೂ ನಮ್ಮಂತೆಯೇ ಒಬ್ಬ ಮನುಷ್ಯ; ಬೇರೆ ರೂಪದಲ್ಲಿರುವ ನಾವೇ ಆ ಅನ್ಯರು. ಹೀಗೆ ನಾವೊಂದು ವಿಷ ವರ್ತುಲದೊಳಗೆ ಸಿಲುಕಿಬಿಡುತ್ತೇವೆ. ಕಳುವುದೇ ತಮ್ಮ ಕಾಯಕವೆಂದು ತಿಳಿದ ಆ ಕಳ್ಳರು ಕೊಡುವ ಹಿಂಸೆ ಮಾತ್ರ ನಿಲ್ಲುವುದಿಲ್ಲ. ಕಳ್ಳರನ್ನು ದಂಡಿಸುವುದಕ್ಕಿಂತ ಅವರ ಹಿಂಸೆಯನ್ನು ಸಹಿಸಿಕೊಳ್ಳುವುದೇ ಮೇಲೆಂದು ನಾವು ಕಟ್ಟಕಡೆಗೆ

ತೀರ್ಮಾನಿಸಿಬಿಡುತ್ತೇವೆ. ನಮ್ಮ ಕ್ಷಮಾಗುಣವು ಅವರಲ್ಲಿ ಸದ್ಬುದ್ಧಿಯನ್ನುಂಟು ಮಾಡಲೂಬಹುದು. ಅವರನ್ನು ನಾವು ತಾಳಿಕೊಳ್ಳುವುದರಿಂದ, ಕಳ್ಳರೂ ನಮಗಿಂತ ಬೇರೆಯವರಲ್ಲ, ಅವರು ನಮ್ಮ ಸ್ನೇಹಿತರು, ಸಹೋದರರು. ಆದ್ದರಿಂದ ಅವರನ್ನು ದಂಡಿಸಬಾರದೆಂಬ ನಿರ್ಧಾರಕ್ಕೆ ನಾವು ಬರುವೆವು.

ಆದರೆ, ಅವರ ಕಾಟವನ್ನು ನಾವು ಸಹಿಸಿಕೊಳ್ಳಬಹುದೇ ಹೊರತು ಅವರು ಮಾಡುವ ಹಿಂಸೆಯನ್ನಲ್ಲ. ಹಾಗೆ ಸಹಿಸಿಕೊಳ್ಳುವುದು ಹೇಡಿತನವಾಗುವುದು. ಅದರಿಂದ ನಮಗೆ ಮತ್ತೊಂದು ಕರ್ತವ್ಯವು ಕಾಣಿಸುವುದು. ಕಳ್ಳರೂ ನಮ್ಮ ಬಂಧುಬಳಗದವರು-ಎಂದು ತಿಳಿದ ನಾವು, ಅವರಿಗೂ ನಮ್ಮ ಬಗೆಗೆ ಅದೇ ಭಾವ ಉಂಟಾಗುವಂತೆ ಮಾಡಬೇಕು. ಅವರಲ್ಲಿ ಅಂತಹ ಬಂಧುಭಾವವನ್ನು ಹುಟ್ಟಿಸಲು ನಾವು ತಕ್ಕ ಯೋಜನೆ ಮಾಡಿ, ಶ್ರಮಪಟ್ಟು ಪ್ರಯತ್ನಿಸಬೇಕು. ಅವರ ಹೃದಯವನ್ನು ಗೆಲ್ಲಬೇಕು. ಇದೇ ಅಹಿಂಸೆಯ ಪಥ. ಅದರ ಸಲುವಾಗಿ ಸತತ ಕಷ್ಟಾನುಭವವನ್ನೂ, ಅನಂತ ತಾಳ್ಮೆಯನ್ನೂ, ಅಭ್ಯಾಸ ಮಾಡಿಕೊಳ್ಳಬೇಕಾಗುವುದು. ಈ ಎರಡು ಗುಣಗಳು ನಮ್ಮಲ್ಲಿ ಇದ್ದರೆ, ಕಳ್ಳನು ಕೊನೆಯಲ್ಲಾದರೂ ಸನ್ಮಾರ್ಗಕ್ಕೆ ಬಂದೇ ಬರುವನು. ಹೀಗೆ ಕ್ರಮಕ್ರಮವಾಗಿ ನಾವು ಇಡೀ ಜಗತ್ತಿನೊಡನೆ ಮಿತ್ರತ್ವ ಉಳ್ಳವರಾಗುತ್ತೇವೆ; ಅದರಿಂದ ಸತ್ಯದ ಮತ್ತು ದೇವರ ಮಹಿಮೆಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತೇವೆ. ಕಷ್ಟಾನುಭವದಲ್ಲಿಯೂ ನಮ್ಮ ಮನಶ್ಶಾಂತಿಯು ಹೆಚ್ಚುತ್ತ ಹೋಗುವುದು; ನಾವು ಮತ್ತಷ್ಟು ಧೈರ್ಯವಂತರೂ ಪ್ರಯತ್ನಶೀಲರೂ ಆಗುತ್ತೇವೆ; ಯಾವುದು ಶಾಶ್ವತ, ಯಾವುದು ಅಶಾಶ್ವತ ಎಂಬುದನ್ನು ಮತ್ತಷ್ಟು ಸ್ಪಷ್ಟವಾಗಿ ತಿಳಿಯುತ್ತೇವೆ; ನಮ್ಮ ಕರ್ತವ್ಯ ಯಾವುದು, ಯಾವುದಲ್ಲ-ಎಂಬುದನ್ನು ತಿಳಿಯುವ ವಿವೇಕ ಉಂಟಾಗುತ್ತದೆ. ನಮ್ಮ ಗರ್ವವು ಕರಗಿಹೋಗಿ, ನಾವು ವಿನೀತರಾಗುತ್ತೇವೆ. ನಮ್ಮ ಪ್ರಾಪಂಚಿಕ ಬಂಧನಗಳು ಸಡಿಲವಾಗುತ್ತವೆ. ನಮ್ಮೊಳಗಿನ ಪಾಪವು ದಿನೇ ದಿನೇ ಕ್ಷಯಿಸುತ್ತ ಹೋಗುತ್ತದೆ.

ಅಹಿಂಸೆಯೆಂದರೆ ಉಪಯೋಗಿಸಲು ಬಾರದ ಕಚ್ಚಾಸರಕಲ್ಲ. ಯಾವ ಪ್ರಾಣಿಗೂ ದೈಹಿಕವಾಗಿ ನೋವುಂಟು ಮಾಡದಿರುವುದು ಅಹಿಂಸೆಯ ಒಂದಂಶವೆಂಬಲ್ಲಿ ಸಂದೇಹವಿಲ್ಲ; ಆದರೆ, ಅದು ಅಹಿಂಸೆಯ ತೀರ ಅಲ್ಪ ಅಂಶವಷ್ಟೆ. ಪ್ರತಿಯೊಂದು ಕೆಟ್ಟ ಯೋಚನೆಯಿಂದಲೂ, ಅತಿ

ವರ್ತನೆಯಿಂದಲೂ, ಸುಳ್ಳಿನಿಂದಲೂ, ದ್ವೇಷದಿಂದಲೂ, ಪರರಿಗೆ ಅಹಿತ ಬಗೆಯುವುದರಿಂದಲೂ ಅಹಿಂಸೆಯ ತತ್ವವು ಭಂಗಿಸಲ್ಪಡುವುದು. ಜಗತ್ತಿನ ಬೇಡಿಕೆಗಳಿಗೆ ಅಂಟಿಕೊಂಡಿರುವುದೂ ಅಹಿಂಸಾ ತತ್ವದ ಭಂಗವೇ ಸರಿ. ಈ ಜಗತ್ತಿಗೆ ನಮ್ಮ ನಿತ್ಯದ ಆಹಾರವೂ ಬೇಕಾದೀತು!

ನಮ್ಮ ಭೌತಿಕ ಸಾಮರ್ಥ್ಯವನ್ನರಿತುಕೊಂಡು, ನಮ್ಮ ಶಕ್ತಿಗನುಗುಣವಾಗಿ ನಾವು ಧ್ಯೇಯಸಾಧನೆಗಾಗಿ ದಿನೇ ದಿನೇ ಪ್ರಯತ್ನ ಮಾಡುತ್ತ ಹೋಗಬೇಕು.

ಅಹಿಂಸೆಯಿಲ್ಲದೆ ಸತ್ಯವನ್ನು ಸಾಧಿಸಿ, ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲವೆಂಬ ಮಾತು ಈ ಮೇಲಣ ವಿವರಣೆಯಿಂದ ಸ್ಪಷ್ಟವಾಗಿರಬಹುದು. ಅಹಿಂಸೆ ಮತ್ತು ಸತ್ಯಗಳು ಪ್ರತ್ಯೇಕಿಸಲು ಬಾರದಷ್ಟು ನಿಕಟವಾಗಿ ಹೆಣೆದುಕೊಂಡಿವೆ. ಅವುಗಳು ಒಂದು ನಾಣ್ಯದ ಎರಡು ಮಗ್ಗಲುಗಳಂತಿವೆ; ಅವುಗಳಲ್ಲಿ ಹಿಮ್ಮಗ್ಗಲಾವುದು ಮುಮ್ಮಗ್ಗಲಾವುದೆಂದು ಯಾರು ಹೇಳಬಲ್ಲರು? ಆದರೂ, ಅಹಿಂಸೆಯು ಸಾಧನ, ಸತ್ಯವು ಅದರ ಗುರಿ. ಸಾಧನವು ಸಾಧನವೆನಿಸಬೇಕಾದರೆ, (ಅರ್ಥಾತ್ ಉಪಯೋಗವಾಗಬೇಕಾದರೆ), ನಮ್ಮ ಶಕ್ತಿಗದು ಮೀರಿರಬಾರದು, ಆದ್ದರಿಂದ, ಅಹಿಂಸೆಯನ್ನು ಸಾಧನವಾಗಿಟ್ಟುಕೊಳ್ಳುವುದು ನಮ್ಮ ಮುಖ್ಯ ಕರ್ತವ್ಯವಾಗಿದೆ. ನಮ್ಮ ಸಾಧನವು ಶುದ್ಧವಾಗಿದ್ದರೆ, ಶೀಘ್ರವಾಗಿಯಾಗಲೀ, ತಡವಾಗಿಯಾಗಲೀ, ನಾವು ಗುರಿಯನ್ನು ಮುಟ್ಟಿಯೇ ತೀರುವೆವು. ಸಾಧನಶುದ್ಧಿಯಲ್ಲಿ ದೃಢವಾದ ಶ್ರದ್ಧೆ ಇದ್ದರೆ, ವಿಜಯವು ಕಟ್ಟಿಟ್ಟ ಮಾತು. ನಮಗೆಷ್ಟೇ ಕಷ್ಟಗಳಿದಿರಾಗಲಿ, ತಾತ್ಕಾಲಿಕವಾದ ಸೋಲುಂಟಾಗಲೀ, ದೇವರೇ ತಾನಾಗಿರುವ ಸತ್ಯದ ಶೋಧನೆಯನ್ನು ಮಾತ್ರ ಬಿಡಕೂಡದು.

(ಯರವಡಾ ಮಂದಿರ, 1945)

* * *

ಅಹಿಂಸೆಯೊಡನೆ ಆಗಿರುವ ನನ್ನ ಲಗ್ನವು ಎಷ್ಟು ಅಬಾಧಿತವಾಗಿದೆಯೆಂದರೆ, ನಾನು ಆತ್ಮಹತ್ಯೆಯನ್ನಾದರೂ ಮಾಡಿಕೊಂಡೇನೇ ಹೊರತು, ಅಹಿಂಸೆಯನ್ನು ಬಿಟ್ಟುಕೊಡಲಾರೆನು. ಈ ಸಂಬಂಧದಲ್ಲಿ ನಾನು ಸತ್ಯದ ಹೆಸರನ್ನೆತ್ತಿಲ್ಲವೇಕೆಂದರೆ, ಸತ್ಯವು ಅಹಿಂಸೆಯ ಹೊರತು ಬೇರಾವ ರೀತಿಯಿಂದಲೂ ವ್ಯಕ್ತವಾಗುವುದಿಲ್ಲ.

(ಯ.ಇ., 12-11-31, ಪು. 345)

ಸತ್ಯ – ಪ್ರಜಾಸತ್ತೆ

ನಿಜವಾದ ಪ್ರಜಾಸತ್ತೆ ಅಥವಾ ಸಾಮಾನ್ಯ ಜನತೆಯ ಸ್ವರಾಜ್ಯವು ಅಸತ್ಯದ ಮತ್ತು ಹಿಂಸೆಯ ಮೂಲಕವಾಗಿ ಎಂದಿಗೂ ಬರಲಾರದು; ಅದರ ಕಾರಣವಿಷ್ಟೆ-ವಿರೋಧಿಗಳನ್ನು ಹತ್ತಿಕ್ಕುವುದರಿಂದ ಇಲ್ಲವೆ ನಾಶಮಾಡುವುದರಿಂದಲೇ ವಿರೋಧವನ್ನು ಕಿತ್ತೊಗೆಯಬೇಕಾಗುವುದು. ಹಾಗೆ ಮಾಡುವುದರಿಂದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಭಂಗ ಬರುವುದು. ಬೆರಕೆಯಿಲ್ಲದ ಪರಿಶುದ್ಧವಾದ ಅಹಿಂಸೆಯ ರಾಜ್ಯದಲ್ಲಿ ಮಾತ್ರವೇ ವ್ಯಕ್ತಿ ಸ್ವಾತಂತ್ರ್ಯಕ್ಕೆ ಪೂರ್ಣ ಅವಕಾಶ ಸಿಗುವುದು.

(ಹ., 27–5–39, ಪು. 143)

* * *

ನಮ್ಮ ಮಾತು ಅಪ್ರಿಯವಾಗಿದ್ದರೂ ಅದು ಸತ್ಯವೆಂಬ ನಂಬಿಕೆ ನಮಗಿದ್ದರೆ, ಅದನ್ನು ಹೇಳುವುದರಿಂದ ಅಥವಾ ಬರೆಯುವುದರಿಂದ ಎಂದಿಗೂ ಹಿಂಸೆ ಮಾಡಿದಂತಾಗದು. ನಮ್ಮ ಯೋಚನೆ ಮಾತು, ಅಥವಾ ಕೃತಿಯಲ್ಲಿ ವಿರೋಧಿಗೆ ಅಹಿತ ಮಾಡಬೇಕೆಂಬ ಉದ್ದೇಶವಿದ್ದರೆ ಮಾತ್ರ ಅದು ಹಿಂಸೆಯಾಗುವುದು.ಒಣ ಸಭ್ಯತೆಗೆ ಕಟ್ಟುಬಿದ್ದು ಅಥವಾ ಅನ್ಯರ ಮನಸ್ಸಿಗೆ ನೋವಾಗುತ್ತದೆಂಬ ಅಂಜಿಕೆಯಿಂದ ಸತ್ಯವನ್ನು ಹೇಳಲು ಹಿಂಜರಿಯುತ್ತ ಹೋಗುವವರು ಕೊನೆಗೆ ಡಾಂಭಿಕರಾಗುವುದು ನಿಶ್ಚಿತ. ವ್ಯಕ್ತಿಗಳಲ್ಲಾಗಲೀ, ಸಮಾಜಗಳಲ್ಲಾಗಲೀ, ಜನಾಂಗಗಳಲ್ಲಾಗಲೀ ಅಹಿಂಸಾ ಮನೋಭಾವವನ್ನು ಹುಟ್ಟಿಸಿ, ಬಲಿಸಬೇಕಾದರೆ, ಸತ್ಯವನ್ನು ಹೇಳಲೇಬೇಕಾಗುವುದು; ಆ ಸತ್ಯವು ತಾತ್ಪೂರ್ತಿಕವಾಗಿ ನೋವನ್ನುಂಟುಮಾಡಬಹುದು ಅಥವಾ ಅಪ್ರಿಯವಾಗಿರಬಹುದು. ಆದರೂ ಸತ್ಯವನ್ನೇ ಹೇಳಬೇಕು.

(ಹ. 19–12–36, ಪು. 362)

* * *

"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್‌ನ ಬ್ರೂಯಾತ್ ಸತ್ಯಮಪ್ರಿಯಂ." (ಸತ್ಯವನ್ನು ಹೇಳಬೇಕು. ಪ್ರಿಯವಾದದ್ದನ್ನು ಹೇಳಬೇಕು, ಅಪ್ರಿಯವಾದ ಸತ್ಯವನ್ನು ಹೇಳಬಾರದು) ಎಂಬ ಈ ಸಂಸ್ಕೃತ ಶ್ಲೋಕಕ್ಕೆ "ಸತ್ಯವನ್ನು ಸೌಮ್ಯವಾಗಿ ಹೇಳಬೇಕು" ಎಂದೇ ಅರ್ಥ. ಸೌಮ್ಯವಾಗಿ ಹೇಳಲು ತಿಳಿಯದವನು ಮೌನವಾಗಿರುವುದೇ ಲೇಸು. ಅದರ ತಾತ್ಪರ್ಯವೇನೆಂದರೆ, ನಾಲಿಗೆಯನ್ನು ನಿಯಂತ್ರಿಸಲಾರದವನಲ್ಲಿ ಸತ್ಯವಿರುವುದಿಲ್ಲ.

(ಯ.ಇ., 17-9-25, ಪು. 318)

* * *

ಸತ್ಯವೇ ದೇವರು

ನನ್ನನ್ನು ಹುಟ್ಟಿಸಿದ ದೇವನನ್ನು ನೋಡಲು ನಾನು ಅತ್ಯಾತುರನಾಗಿದ್ದೇನೆ. ನನ್ನ ಮಟ್ಟಿಗೆ ಆತನು ಸತ್ಯರೂಪನಾಗಿದ್ದಾರೆ. ಪ್ರಾಣ ಹೋದರೂ ಚಿಂತೆ ಇಲ್ಲ. ಎಲ್ಲರನ್ನು ಪ್ರೀತಿಸಬೇಕು- ಎಂಬ ಪ್ರೇಮಶಾಸನಕ್ಕೆ ವಿಧೇಯನಾಗಿ ನಡೆದುಕೊಳ್ಳುವುದರಿಂದಲೇ ದೇವರ ಸಾಕ್ಷಾತ್ಕಾರವಾಗುವುದೆಂಬುದನ್ನು ನಾನು ನನ್ನ ಜೀವನದ ಆರಂಭದಲ್ಲೇ ಕಂಡುಕೊಂಡೆನು.

(ರಾಷ್ಟ್ರಧ್ವನಿ, 1932, ಪು. 319)

* * *

ದೇವರು ಸತ್ಯದ ರೂಪದಲ್ಲಿ ನನಗೊಂದು ಅಮೂಲ್ಯ ನಿಧಿಯಾಗಿದ್ದಾನೆ; ಪ್ರತಿಯೊಬ್ಬರಿಗೂ ಆತನು ಹಾಗೆಯೇ ಆಗಿರಲಿ. ಸತ್ಯಶ್ರದ್ಧೆಯೇ ನಮ್ಮ ಇರುವಿಕೆಯ ಆಧಾರವಾಗಿದೆ.

(ಯರವಾಡ ಮಂದಿರ, ಪು. 6)

* * *

ಜ್ಞಾನವು ಅಮಿತವಾದದ್ದು, ಹಾಗೆಯೇ ಸತ್ಯದ ಪ್ರಯೋಗವೂ ಅಮಿತವಾದದ್ದು. ಪ್ರತಿದಿನವೂ ನಾವು ನಮ್ಮ ಆತ್ಮಶಕ್ತಿಯ ಪರಿಜ್ಞಾನವನ್ನು ಹೆಚ್ಚಿಸುತ್ತ ಹೋಗಬೇಕು. ಹೊಸ ಅನುಭವವು ಹೊಸ ಕರ್ತವ್ಯಗಳನ್ನು ಕಲಿಸುತ್ತದೆ. ಆದರೂ ಸತ್ಯವು ಸದಾ ಒಂದೇ ಆಗಿರುತ್ತದೆ. ಸತ್ಯದ ಪರಿಪೂರ್ಣ ಸ್ವರೂಪವನ್ನು ಯಾರಿಗಾದರೂ ಅರಿಯಲು ಸಾಧ್ಯವೇ?

(ಯ.ಇ., 8–4–1926 ಪು. 131)

* * *

ಜಗತ್ತಿಗೆ ಕಲಿಸಲು ಹೊಸದೇನೂ ನನ್ನಲ್ಲಿಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೇ ಪುರಾತನವಾಗಿವೆ. ನಾನು ಮಾಡಿದ್ದೇನೆಂದರೆ, ಅವುಗಳನ್ನು ಎಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಯೋಗಕ್ಕೆ ತರಲು ಸಾಧ್ಯವೆಂಬುದನ್ನು ಮಾತ್ರ ಹಾಗೆ ಮಾಡುವಾಗ ಕೆಲವೊಮ್ಮೆ ನನ್ನಿಂದ ತಪ್ಪುಗಳಾದವು ಹಾಗೂ ಆ ತಪ್ಪುಗಳಿಂದ ನಾನು ಪಾಠ ಕಲಿತೆನು. ಈ ರೀತಿ ಜೀವನವೂ ಅದರ ಸಮಸ್ಯೆಗಳೂ ನನಗೆ ಸತ್ಯ ಮತ್ತು ಅಹಿಂಸೆಗಳ ಆಚರಣೆಯಲ್ಲಿಯ ಅನೇಕ ಪ್ರಯೋಗಗಳಾಗಿ ಪರಿಣಮಿಸಿವೆ. ಒಬ್ಬ ಜೈನ ಮುನಿಗಳು ನಿರ್ದಿಷ್ಟವಾಗಿ ಹೇಳಿರುವಂತೆ, ನಾನು ಸತ್ಯದ ಉಪಾಸಕನಾಗಿರುವಷ್ಟು ಗಾಢತರವಾಗಿ ಅಹಿಂಸೆಯ ಭಕ್ತನಾಗಿರುವುದಿಲ್ಲ. ಆದ್ದರಿಂದಲೇ ನಾನು ಸತ್ಯಕ್ಕೆ ಪ್ರಥಮ ಸ್ಥಾನವನ್ನಿತ್ತು ಅಹಿಂಸೆಗೆ ಎರಡನೆಯ ಸ್ಥಾನವನ್ನಿತ್ತಿದ್ದೇನೆ. ಅವರೇ ಹೇಳಿರುವಂತೆ ನಾನು ಸತ್ಯದ ಸಲುವಾಗಿ ಅಹಿಂಸೆಯನ್ನು ಬಲಿಕೊಡಲಿಕ್ಕೂ ಸಿದ್ಧನಾಗಿರುವೆನು. ನಿಜವಾಗಿ ಹೇಳುವುದಾದರೆ, ಸತ್ಯಶೋಧನೆಯ ದಾರಿಯಲ್ಲಿ ನಡೆಯುವಾಗಲೇ ನಾನು ಅಹಿಂಸೆಯನ್ನು ಕಂಡುಹಿಡಿದೆನು.

(ಹ., 28–3–1936, ಪು. 49)

ಸತ್ಯಪಥ

ಸತ್ಯದ ದಾರಿಯು ಎಷ್ಟು ನೇರವಾಗಿದೆಯೋ ಅಷ್ಟೇ ಇಕ್ಕಟ್ಟಿನದಾಗಿಯೂ ಇದೆ. ಅಹಿಂಸೆಯ ದಾರಿಯೂ ಹಾಗೆಯೇ ಇದೆ. ಕತ್ತಿಯ ಬಾಯಿಯ ಮೇಲೆ ನಡೆದಂತೆಯೇ ಇದೆ ಆ ದಾರಿ. ಡೊಂಬರಾಟದವನು ಏಕಾಗ್ರಚಿತ್ತದಿಂದಲೇ ಹಗ್ಗದ ಮೇಲೆ ನಡೆಯುತ್ತಾನೆ. ಆದರೆ ಸತ್ಯ-ಅಹಿಂಸಾ ಮಾರ್ಗದಲ್ಲಿ ನಡೆಯುವವನಿಗೆ ಅದಕ್ಕಿಂತ ಹೆಚ್ಚಿನ ಏಕಾಗ್ರತೆ ಅವಶ್ಯ. ತುಸು ಅಜಾಗರೂಕತೆಯಾದರೆ ಸಾಕು, ಆತನು ನೆಲಕ್ಕುರುಳಿಬಿಡುವನು. ಅವಿಶ್ರಾಂತವಾದ ಪ್ರಯತ್ನದಿಂದ ಮಾತ್ರವೇ ಸತ್ಯವನ್ನು ಅಹಿಂಸೆಯನ್ನು ಸಾಧಿಸಲಿಕ್ಕೆ ಸಾಧ್ಯ.

(ಯರವಾಡ ಮಂದಿರ, ಪು. 7)

* * *

ಹೊರಗಿನ ಶತ್ರುಗಳ ಭಯವನ್ನು ನಾವು ತ್ಯಜಿಸಬೇಕು. ಆದರೆ ನಮ್ಮ ಒಳಗಿನ ಶತ್ರುಗಳಿಗೆ ನಾವು ಸದಾ ಅಂಜಬೇಕಾಗುವುದು. ಕೋಪವೇ ಮೊದಲಾದ ಪಾಶವೀ ಮನೋವಿಕಾರಗಳಿಗೆ ನಾವು ಹೆದರುವುದು ಯುಕ್ತವೇ ಇದೆ. ಈ ಅಂತಶ್ಶತ್ರುಗಳನ್ನು ಗೆದ್ದೆವೆಂದರೆ, ಹೊರಗಣ ಶತ್ರುಗಳ ಭಯವು ತನ್ನಿಂದ ತಾನೇ ನಿಲ್ಲುವುದು.ಅವೆಲ್ಲಕ್ಕೂ ದೇಹವೇ ಕೇಂದ್ರವಾಗಿದ್ದು, ದೇಹವನ್ನು ಸುತ್ತಿಕೊಂಡಿವೆ; ಆದ್ದರಿಂದ ದೇಹದ ಮೇಲಿನ ಮೋಹವನ್ನು ಗೆದ್ದವೆಂದರೆ ಅವೆಲ್ಲವೂ ಮಾಯವಾಗಿಬಿಡುತ್ತವೆ. ಹೊರಗಣ ಭಯವೆಲ್ಲಕ್ಕೂ ನಮ್ಮ ಮನಸ್ಸಿನ ಮೋಹವೇ ಕಾರಣವೆಂಬುದರ ಅರಿವಾಗುವುದು. ದೇಹ, ಸಂಸಾರ ಮತ್ತು ಸಂಪತ್ತುಗಳ ಮೇಲಿನ ಮೋಹವನ್ನು ನಾವು ತ್ಯಜಿಸಿದೊಡನೆಯೇ ನಮ್ಮ (ಹೃದಯದಲ್ಲಿ ಯಾವ ಭಯಕ್ಕೂ ಆಸ್ಪದವಿಲ್ಲದಂತಾಗುವುದು) ಹೃದಯವು ನಿರ್ಭಯವಾಗುವುದು. ಈ

ಜಗತ್ತಿನಲ್ಲಿ ಯಾವುದೂ ನಮ್ಮದಲ್ಲ. ಸ್ವತಃ ನಾವೂ ದೇವರಿಗೆ ಸೇರಿದ ಸ್ವತ್ತುಗಳು. ಹೀಗೆ ನಾವು ನಮ್ಮ ಯಜಮಾನಿಕೆಯನ್ನು ಬಿಟ್ಟುಕೊಟ್ಟು ನಮ್ಮ ಕಾಲಡಿಯ ಧೂಳಿಗಿಂತಲೂ ಕೆಳಗಿನವರೆಂಬಷ್ಟು ಮಟ್ಟಿನ ವಿನೀತ ಸೇವಕರಾಗುತ್ತಲೇ, ಎಲ್ಲ ಭಯವೂ ಮಂಜಿನಂತೆ ಮಾಯವಾಗಿಬಿಡುತ್ತದೆ; ಆಗಲೇ ನಾವು ಅಚಲವಾದ ಶಾಂತಿಯನ್ನು ಪಡೆದು ಸತ್ಯನಾರಾಯಣ(ಸತ್ಯವೆಂಬ ದೇವರು)ನನ್ನು ಪ್ರತ್ಯಕ್ಷವಾಗಿ ನೋಡುತ್ತೇವೆ.

(ಯರವಾಡ ಮಂದಿರ – ಪು. 43)

* * *

ಸತ್ಯಾನುಸರಣೆಯೇ ನಿಜವಾದ ಭಕ್ತಿ. ಅದೇ ದೇವರೆಡೆಗೊಯ್ಯುವ ದಾರಿ; ಅದರಲ್ಲಿ ಹೇಡಿತನಕ್ಕಾಗಲಿ, ಅಪಜಯಕ್ಕಾಗಲೀ ಜಾಗವಿಲ್ಲ. ಮರಣವನ್ನೇ ಅಮರ ಜೀವನದ ದ್ವಾರವಾಗಿ ಮಾರ್ಪಡಿಸುವ ರಕ್ಷಾಬಂಧ (ತಾಯಿತ) ವದು!

(ಯರವಾಡ ಮಂದಿರ – ಪು. 5)

* * *

ಸತ್ಯಶೋಧನೆಯಲ್ಲಿ ತೊಡಗಿದವನು ವಿರೋಧಿಯನ್ನು ಹಿಂಸಿಸಲು ಅವಕಾಶವೇ ಇರುವುದಿಲ್ಲ ಹಾಗೂ ಆತನು ತಾಳ್ಮೆಯಿಂದಲೂ ಸಹಾನುಭೂತಿಯಿಂದಲೂ ವಿರೋಧಿಯನ್ನು ಹಾದಿಗೆ ತರಬೇಕು ಎಂಬುದನ್ನು ನಾನು ಸತ್ಯಾಗ್ರಹದ ಅನುಷ್ಠಾನದ ಆರಂಭ ಕಾಲದಲ್ಲೇ ಕಂಡುಕೊಂಡೆನು. ಯಾಕೆಂದರೆ, ಒಬ್ಬನಿಗೆ ಸತ್ಯವಾಗಿ ತೋರಿದುದು ಮತ್ತೊಬ್ಬನಿಗೆ ತಪ್ಪಾಗಿ ತೋರಬಹುದು. ತಾಳ್ಮೆ ಎಂದರೆ ವಿರೋಧಿಯನ್ನು ಹಿಂಸಿಸದೆ ಕಷ್ಟವನ್ನು ತಾನೇ ಸಹಿಸಿಕೊಳ್ಳುವುದು. ಅದೇ ಸತ್ಯದ ಸಾಮರ್ಥ್ಯ!

(ಯ.ಇ., 1919– ಪು. 1)

* * *

ಸತ್ಯ–ನಿಸ್ವಾರ್ಥತೆ

ಯಾವನ ಸರ್ವಕರ್ಮಗಳೂ ಸತ್ಯದ ಸಾಕ್ಷಾತ್ಕಾರಕ್ಕಾಗಿಯೇ ಅರ್ಪಿತವಾಗಿಯೋ ಆತನು ಸಂಪೂರ್ಣ ನಿಸ್ವಾರ್ಥಿಯಾಗಿರಬೇಕಾಗುವುದು; ಸ್ವಾರ್ಥಬದ್ಧವಾದ ಮನೆ, ಸಂಸಾರ, ಮಕ್ಕಳು ಎಂಬುದರ ಗೊಡವೆಗೆ ಹೋಗಲು ಆತನಿಗೆ ಅವಕಾಶವೇ ಇರುವುದಿಲ್ಲ.

(ಯರವಾಡ ಮಂದಿರ–ಪು. 14)

* * *

ಯಾರು ಸತ್ಯದ ಸಲುವಾಗಿ ಪ್ರಾಣಾರ್ಪಣ ಮಾಡಲಿಕ್ಕೂ ಸಿದ್ಧರಾಗಿರುವರೋ ಅಂಥವರ ಮೂಲಕವಾಗಿಯೇ ಅದೃಶ್ಯವಾದ ಸತ್ಯವು ತನ್ನ ಬೆಲೆಯನ್ನು ತೋರ್ಪಡಿಸಿಕೊಳ್ಳುವುದು.

(ಯ.ಇ., 22–12–11–ಪು. 424)

* * *

ಪರಸ್ಪರ ಸಹನೆಯಿಂದಿರುವುದೇ ಶಿಷ್ಟಾಚಾರದ ಸ್ವರ್ಣ ಮಾಧ್ಯಮವಾಗಿವೆ. ಯಾಕೆಂದರೆ, ಎಲ್ಲರೂ ಒಂದೇ ರೀತಿಯಲ್ಲಿ ಆಲೋಚಿಸಲಾರೆವು. ಹಾಗೆಯೇ ನಾವು ಸತ್ಯವನ್ನು ಬೇರೆಬೇರೆ ಕೋನಗಳಿಂದ, ಅಂಶತಃ ಮಾತ್ರ ಕಾಣುತ್ತೇವೆ.

(ಯ.ಇ., 23–9–26–ಪು. 234)

* * *

ಸತ್ಯವು ಪ್ರಕಟವಾಗದೇ ಇರದು. ಅದನ್ನು ಬಂಧಿಸಿಡಲು ಸಾಧ್ಯವಿಲ್ಲ. ಸೂರ್ಯನು ಹೇಗೆ ತನ್ನ ತನ್ನ ಬೆಳಕನ್ನು ಬಚ್ಚಿಡಲಾರನೋ ಹಾಗೆ ಸತ್ಯದ ಪ್ರತಿಯೊಂದು ಆವಿಷ್ಕಾರದಲ್ಲಿಯೂ ಪ್ರಸರಣದ ಬೀಜಗಳು ಹುದುಗಿಕೊಂಡಿರುತ್ತವೆ.

(ಮಾಡರ್ನ್ ರೆವ್ಯೂ, 1935–ಪು. 413)

* * *

ಸತ್ಯ ಮತ್ತು ಅಹಿಂಸೆಗಳು ಋಷ್ಯಾಶ್ರಮದೊಳಗಷ್ಟೇ ಅಡಗಿಕೊಂಡಿರುವ ಸದ್ಗುಣಗಳಲ್ಲ; ಸಾರ್ವಜನಿಕ ನ್ಯಾಯಾಸ್ಥಾನಗಳಲ್ಲಿಯೂ, ಶಾಸನ ಸಭೆಗಳಲ್ಲಿಯೂ, ವ್ಯಾಪಾರ ಸ್ಥಳಗಳಲ್ಲಿಯೂ ಪ್ರಯೋಗಿಸಲ್ಪಡುವ ಸದ್ಗುಣಗಳಾಗಿವೆ.

(ಹ., 8–5–37–ಪು. 98)

* * *

ರಾಜಕೀಯದಲ್ಲಿ ಮತ್ತು ಪ್ರಪಂಚದ ವ್ಯವಹಾರಗಳಲ್ಲಿ ಸತ್ಯ ಮತ್ತು ಅಹಿಂಸೆಗಳಿಗೆ ಸ್ಥಾನವಿಲ್ಲವೆಂದು ಕೆಲವು ಗೆಳೆಯರು ಹೇಳುತ್ತಾರೆ. ನಾನು ಅದನ್ನು ಒಪ್ಪುವುದಿಲ್ಲ. ವ್ಯಕ್ತಿಗಳ ಮೋಕ್ಷಕ್ಕಷ್ಟೇ ಅವುಗಳ ಉಪಯೋಗವೆಂದಾದರೆ ನಾನದಕ್ಕೆ ಬೆಲೆಗೊಡೆನು. ನಮ್ಮ ದಿನ ನಿತ್ಯದ ವ್ಯವಹಾರಗಳಲ್ಲಿಯೂ ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಪ್ರಯೋಗವನ್ನೇ ನಾನು ಅದನ್ನು ಒಪ್ಪುವುದಿಲ್ಲ. ವ್ಯಕ್ತಿಗಳ ಮೋಕ್ಷಕ್ಕಷ್ಟೇ ಅವುಗಳ ಉಪಯೋಗವೆಂದಾದರೆ ನಾನದಕ್ಕೆ ಬೆಲೆಗೊಡೆನು. ನಮ್ಮ ದಿನ ನಿತ್ಯದ ವ್ಯವಹಾರಗಳಲ್ಲಿಯೂ ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಪ್ರಯೋಗವನ್ನೇ ನಾನು ಈವರೆಗೂ ಮಾಡುತ್ತ ಬಂದಿದ್ದೇನೆ.

(ಅಮೃತಬಜಾರ್ ಪತ್ರಿಕೆ, 30–6–44)

* * *

ಸತ್ಯ ಮತ್ತು ಅಹಿಂಸೆಗಳು ವ್ಯಕ್ತಿಗಳ ಆಚರಣೆಗೆ ಮಾತ್ರವೇ ಅಲ್ಲದೆ, ಗುಂಪುಗಳ, ಸಮಾಜಗಳ ಮತ್ತು ಜನಾಂಗಗಳ ಆಚರಣೆಗೂ ಬರುವಂತೆ ಮಾಡಬೇಕು. ನನ್ನ ಮಟ್ಟಿಗೆ ಅದೇ ಉದ್ದೇಶವಾಗಿದೆ. ಅದರ ಸಲುವಾಗಿಯೇ ನಾನು ಬದುಕಿದ್ದೇನೆ. ಅದನ್ನು ಸಾಧಿಸುವ ಪ್ರಯತ್ನದಲ್ಲಿ ಪ್ರಾಣ ಕೊಡಲಿಕ್ಕೂ ಸಿದ್ಧನಾಗಿದ್ದೇನೆ. ನನ್ನ ಶ್ರದ್ಧೆಯ ದಿನ ದಿನವೂ ನನಗೆ ಹೊಸ ಸತ್ಯಗಳನ್ನು ನೋಡಲು ನೆರವಾಗುತ್ತಿದೆ. ಅಹಿಂಸೆಯು ಆತ್ಮನ ಗುಣ; ಆದ್ದರಿಂದಲೇ ಜೀವನದ ಎಲ್ಲ ವ್ಯವಹಾರಗಳಲ್ಲಿಯೂ ಎಲ್ಲರಿಂದಲೂ ಅದು ಆಚರಣೆಯಲ್ಲಿ ತರಲ್ಪಡಬೇಕು. ಎಲ್ಲ ವ್ಯವಹಾರಗಳಲ್ಲಿಯೂ ಅದು ಆಚರಿಸಲ್ಪಡಲು ಬಾರದಿದ್ದರೆ, ಅದಕ್ಕೆ ವ್ಯಾವಹಾರಿಕವಾಗಿ ಬೆಲೆ ಇರುವುದಿಲ್ಲ.

(ಹ., 2.3–40, ಪು. 23)

ಸತ್ಯ–ಅರ್ಥಶಾಸ್ತ್ರ

ನೀತಿ ಧರ್ಮವನ್ನು ಅಲಕ್ಷಿಸುವ ಅರ್ಥಶಾಸ್ತ್ರವು ಅಸತ್ಯವಾದದ್ದು. ಅರ್ಥಶಾಸ್ತ್ರ ಪ್ರಪಂಚದಲ್ಲಿ ಅಹಿಂಸೆಯ ತತ್ವವನ್ನು ಹಬ್ಬಿಸುವುದೆಂದರೆ ನೈತಿಕ ಮೌಲ್ಯಗಳಿಗನುಗುಣವಾಗಿಯೇ ಅಂತರರಾಷ್ಟ್ರೀಯ ವ್ಯವಹಾರ ಸಾಗಿಸುವುದು.

ನಿಜವಾದ ಅರ್ಥಶಾಸ್ತ್ರವು ಅತ್ಯುಚ್ಚನೈತಿಕಮಟ್ಟಕ್ಕೆ ವಿರೋಧವಾಗಿರುವುದಿಲ್ಲ. ಹಾಗೆಯೇ, ನೈತಿಕತೆಯ ಹೆಸರಿಗೆ ಅರ್ಹವಾಗಬೇಕಾದ ನೀತಿ ಧರ್ಮವು ನಿಜವಾದ ಅರ್ಥಶಾಸ್ತ್ರಕ್ಕೆ ಅನುಗುಣವಾಗಿರುವುದು. ಹಣದ ಪೂಜೆಯನ್ನೇ ಬೋಧಿಸುವ ಹಾಗೂ, ದುರ್ಬಲರ ದುರ್ಲಾಭ ಪಡೆದು ಧನುರಾಶಿಯೊಟ್ಟಿಕೊಳ್ಳುವಂತೆ ಮಾಡುವ ಅರ್ಥಶಾಸ್ತ್ರವು ಅಸತ್ಯವಾದ ಅರ್ಥಶಾಸ್ತ್ರ. ಅದು ಮೃತ್ಯುಕಾರಕವಾದದ್ದು. ಸತ್ಯವಾದ ಅರ್ಥಶಾಸ್ತ್ರವು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುತ್ತ, ಅತ್ಯಂತ ದುರ್ಬಲರಾದವರಿಗೂ ಕೂಡಾ ಸಮಾನವಾದ ಏಳಿಗೆಯನ್ನುಂಟುಮಾಡಿಕೊಟ್ಟು ಸುಖಜೀವನಕ್ಕೆ ಅತ್ಯವಶ್ಯ ಸಾಧನವಾಗುವುದು.

(ಹ., 9–10–37, ಪು. 292)

* * *

ಸತ್ಯವಾದ ಪ್ರಜಾಸತ್ತೆಯು ಅಹಿಂಸೆಯಿಂದಲೇ ಹುಟ್ಟುವುದು.ಜಾಗತಿಕ ಸಂಯುಕ್ತ ರಾಜ್ಯದ ಕಟ್ಟಡಕ್ಕೆ ಅಹಿಂಸೆಯೊಂದೇ ತಳಹದಿ ಹಾಗೂ ಜಾಗತಿಕ ವ್ಯವಹಾರದಲ್ಲಿ ಹಿಂಸೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕಾಗುವುದು.

(ಸರಕಾರದೊಡನೆ ಮಾಡಿದ ಪತ್ರ ವ್ಯವಹಾರ, 1942, ಪು. 175)

* * *

ಸತ್ಯ–ರಾಜಕೀಯ

ನಾನು ಭಾರತದ ಸ್ವಾತಂತ್ರ್ಯದ ಸಲುವಾಗಿಯೇ ಜೀವಿಸುತ್ತಿದ್ದೇನೆ ಮತ್ತು ಅದರ ಸಲುವಾಗಿಯೇ ಸಾಯುವೆನು. ಏಕೆಂದರೆ, ಅದು ಸತ್ಯದ ಭಾಗವಾಗಿದೆ. ಸ್ವತಂತ್ರ ಭಾರತವು ಮಾತ್ರವೇ ಸತ್ಯವಾದ ದೇವರನ್ನು ಪೂಜಿಸಬಲ್ಲದು.

(ಯ.ಇ., 3–4–24, ಪು. 109)

* * *

ನನ್ನಲ್ಲಿಯೇ ವಿಶೇಷವಾದ ದೈವಿಕತೆ ಇದೆ ಎಂದು ನಾನು ಪ್ರತಿಪಾದಿಸುವುದಿಲ್ಲ. ನಾನು ಪ್ರವಾದಿಯೂ ಅಲ್ಲ. ನಾನೊಬ್ಬ ನಮ್ರನಾದ ಸತ್ಯಶೋಧಕ, ಅದರಲ್ಲಿಯೇ ನಿರತನಾದವನು. ದೇವರನ್ನು ಪ್ರತ್ಯಕ್ಷ ನೋಡಲು ಯಾವ ತ್ಯಾಗ ಮಾಡಲಿಕ್ಕೂ ನಾನು ಸಿದ್ಧನಾದವನು. ನನ್ನ ಸಕಲ ಕರ್ಮಗಳೂ – ಸಾಮಾಜಿಕ, ರಾಜಕೀಯ, ನೈತಿಕ ಅಥವಾ ಮಾನವೀಯ ಯಾವುದೇ ಇರಲಿ–ಅದರ ಸಲುವಾಗಿಯೇ ಇವೆ. ದೇವರು ಅತ್ಯಂತ ಮೇಲಿನವರಲ್ಲಿರುವುದಕ್ಕಿಂತ ತೀರ ಕೆಳಗಿನವರಲ್ಲಿಯೇ ಹೆಚ್ಚಾಗಿ ಇದ್ದಾನೆಂದು ನಾನು ತಿಳಿದಿರುವುದರಿಂದ, ಈ ಕೆಳಗಿನವರೊಂದಿಗೆ ಸೇರಲು ನಾನು ಯತ್ನಿಸುತ್ತೇನೆ. ಅದಕ್ಕೆ ಅವರ ಸೇವೆಯು ಅಗತ್ಯವಾಗಿದೆ. ಆದ್ದರಿಂದಲೇ ದಲಿತರ ಸೇವೆಗಾಗಿ ನಾನು ಹಾತೊರೆಯುತ್ತಿದ್ದೇನೆ. ರಾಜಕೀಯಕ್ಕಿಳಿಯದೆ ಈ ಸೇವೆ ಸಾಧ್ಯವಿಲ್ಲವಾದ್ದರಿಂದಲೇ ನಾನು ರಾಜಕೀಯಕ್ಕೆ ಬಂದಿದ್ದೇನೆ. ಹೀಗೆ, ನಾನು ಯಾರ ಯಜಮಾನನೂ ಅಲ್ಲ; ತಪ್ಪು ತಡೆ ಮಾಡುವ ಸಾಮಾನ್ಯ ಮನುಷ್ಯ ನಾನು; ಭಾರತದ ಮತ್ತು ಅದರ ಮೂಲಕವಾಗಿ ಇಡೀ ಮಾನವ ಕುಟುಂಬದ ಸೇವೆಗಾಗಿ ಪ್ರಯತ್ನಿಸುತ್ತಿರುವ ವಿನಮ್ರ ಸೇವಕ ನಾನು.

(ಯ.ಇ., 11–9–24, ಪು. 298)

* * *

ಸತ್ಯ–ಮತಧರ್ಮ

ಸತ್ಯ ಮತ್ತು ನಿಷ್ಕಪಟತೆಗಳಿಗಿಂತ ಮೇಲಾದ ಧರ್ಮವಿಲ್ಲ. ಧರ್ಮವೆಂದರೇನೆಂಬುದನ್ನಷ್ಟು ವಿವರಿಸಲೆಳಸುತ್ತೇನೆ. ಅದು ಹಿಂದೂ ಧರ್ಮವಲ್ಲ; ಹಿಂದೂ ಧರ್ಮವನ್ನು ಇತರ ಎಲ್ಲ ಧರ್ಮಗಳಿಗಿಂತಲೂ ಹೆಚ್ಚಾಗಿ ನಾನು ಪ್ರೀತಿಸುತ್ತೇನಾದರೂ, ಅದನ್ನೂ ಮೀರಿನಿಂತ ಹಾಗೂ ಯಾವುದು ವ್ಯಕ್ತಿಯ ಸ್ವಭಾವವನ್ನೇ ಬದಲಿಸಿಬಿಡುವುದೋ, ಹಾಗೂ ಯಾವುದು ಸತ್ಯದೊಂದಿಗೆ ಅವಿಚ್ಛಿನ್ನವಾಗಿ ಕೂಡಿಸಿಬಿಡುವುದೋ ಮತ್ತು ಸದಾ ಪರಿಶುದ್ಧಗೊಳಿಸುತ್ತ ಹೋಗುವುದೋ ಅದೇ ಧರ್ಮ. ಅದು ಮನುಷ್ಯ ಸ್ವಭಾವದಲ್ಲಿರುವ ಶಾಶ್ವತವಾದ ವಸ್ತುವಾಗಿದ್ದು, ಎಂತಹ ಬೆಲೆ ತೆತ್ತಾದರೂ ಪೂರ್ಣ ವಿಕಾಸಗೊಳ್ಳುತ್ತದೆ; ಹಾಗೂ ಆತ್ಮವ(ದೇವರು)ನ್ನು ಸಾಕ್ಷಾತ್ಕರಿಸಿಕೊಳ್ಳುವವರೆಗೂ ಅದು ಮನುಷ್ಯನನ್ನು ಶಾಂತವಾಗಿರಗೊಡದು; ಅದು ಮನುಷ್ಯನ ಮತ್ತು ಸೃಷ್ಟಿಸಿದ ದೇವರ ಪರಸ್ಪರ ಸಂಬಂಧವನ್ನು ಸರಿಯಾಗಿ ನಿರ್ಧರಿಸುತ್ತದೆ.

(ಯ.ಇ., 12–5–20)

* * *

(ಪರಧರ್ಮ) ಸಹಿಷ್ಣುತೆ ಎಂಬ ಪದವು ನನಗೆ ರುಚಿಸದು, ಆದರೆ ಅದಕ್ಕಿಂತ ಬೇರೆ ಉತ್ತಮ ಪದ ನನ್ನ ಯೋಚನೆಗೆ ಬರುವುದಿಲ್ಲವಾಗಿದೆ. ಸಹಿಷ್ಣುತೆ ಎಂಬ ಪದದಲ್ಲಿ, ತನ್ನ ಧರ್ಮಕ್ಕಿಂತ ಅನ್ಯರದ್ದು ತುಸು ಕಡಿಮೆಯದಾದರೂ ಅದನ್ನು ರಿಯಾಯಿತಿಯಿಂದ ನೋಡತಕ್ಕದ್ದೆಂಬ, ಅರ್ಥವು ಧ್ವನಿತವಾಗುತ್ತದೆ; ಆದರೆ, ನಾವು ನಮ್ಮ ಧರ್ಮವನ್ನು ನೋಡುವಷ್ಟೇ ಗೌರವದಿಂದ ಅನ್ಯರದ್ದನ್ನೋ ನೋಡಬೇಕೆಂದು ಅಹಿಂಸೆಯು ಬೋಧಿಸುತ್ತದೆ; ಹಾಗೆ ನೋಡುವುದರಿಂದ ನಮ್ಮ ಧರ್ಮದಲ್ಲಿಯೂ ಅನ್ಯ ಧರ್ಮಗಳಲ್ಲಿರಬಹುದಾದ ಲೋಪದೋಷಗಳುಂಟೆಂದು ಒಪ್ಪುವಂತಾಗುವುದು. ಪ್ರೇಮ ಶಾಸನಕ್ಕೆ ಬದ್ಧನಾದ ಸತ್ಯಶೋಧಕನು ಈ ಮಾತಿಗೆ ಒಪ್ಪುತ್ತಾನೆ. ನಮಗೆ ಪೂರ್ಣ ಸತ್ಯದ ದರ್ಶನವಾಗಿದ್ದರೆ, ನಾವು ಕೇವಲ ಶೋಧಕರಾಗಿಯೇ ಇರುವುದರಿಂದ, ನಮ್ಮ ನ್ಯೂನತೆಗಳ ಅರಿವಾಗಿ, ನಾವು ಶೋಧನೆಯನ್ನು ನಡೆಸುತ್ತ ಹೋಗುತ್ತಿದ್ದೇವೆ. ನಾವು ಸದೋಷರಾಗಿದ್ದ ಮೇಲೆ, ನಮ್ಮ ಕಲ್ಪನೆಯ ಧರ್ಮವೂ ಸದೋಷವೆಂದಾಗುವುದು. ಹೇಗೆ ನಾವು ದೇವರನ್ನು ಸಾಕ್ಷಾತ್ಕರಿಸಿಕೊಂಡಿಲ್ಲ... ಹೀಗೆ, ನಮ್ಮ ಕಲ್ಪನೆಯ

ಧರ್ಮವು ಸುದೋಷವಾಗಿದ್ದು, ಯಾವಾಗಲೂ ಒಂದು ಬಗೆಯ ವಿಕಾಸಕ್ಕೂ ಪುನರ್ವ್ಯಾಖ್ಯೆಗೂ ಗುರಿಯಾಗುವುದು. ಸತ್ಯದ ದಾರಿಯಲ್ಲಿ, ದೇವರೆಡೆಗೊಯ್ಯುವ ದಾರಿಯಲ್ಲಿ, ನಮ್ಮ ಪ್ರಗತಿಯು ಈ ಬಗೆಯ ವಿಕಾಸದಿಂದಲೇ ಸಾಧ್ಯ ಮತ್ತು ಮನುಷ್ಯ ಸ್ಥಾಪಿತವಾದ ಎಲ್ಲ ಮತಧರ್ಮಗಳೂ ಸುದೋಷವಾದರೆ, ಯಾವುದು ನಿರ್ದೋಷವಾದದ್ದೆಂಬ ಪ್ರಶ್ನೆಗೇ ಅವಕಾಶವಿಲ್ಲದಂತಾಗುವುದು. ಎಲ್ಲ ಧರ್ಮಗಳೂ ಅಪೌರುಷೇಯ ಸತ್ಯ ಆದರೆ ಎಲ್ಲವೂ ಅಪರಿಪೂರ್ಣವಾಗಿದ್ದು ದೋಷಕ್ಕೆಡೆಕೊಡುತ್ತದೆ. ಅನ್ಯ ಧರ್ಮಗಳನ್ನು ಗೌರವಿಸುವಾಗ ಅವುಗಳ ದೋಷಗಳ ಬಗೆಗೆ ಕಣ್ಮುಚ್ಚಿಕೊಳ್ಳಬೇಕಾಗಿಲ್ಲ. ನಮ್ಮ ಧರ್ಮದಲ್ಲಿನ ದೋಷಗಳನ್ನೂ ನಾವು ಅರಿತಿರಬೇಕು; ಆದರೂ ಅದನ್ನು ತ್ಯಜಿಸದೆ, ಆದರ ದೋಷಗಳನ್ನು ಸುಧಾರಿಸಲೆತ್ನಿಸಬೇಕು. ಎಲ್ಲ ಧರ್ಮಗಳನ್ನೂ ಸಮಾನ ದೃಷ್ಟಿಯಿಂದ ನೋಡುತ್ತ, ತುಸುವಾದರೂ ಅಳುಕದೆ, ಅವುಗಳಲ್ಲಿಯ ಒಳ್ಳೆಯ ಗುಣಗಳನ್ನು ನಮ್ಮ ಧರ್ಮಕ್ಕೆ ಕೂಡಿಸಿಕೊಳ್ಳುವುದು ನಮ್ಮ ಕರ್ತವ್ಯವೆಂದು ತಿಳಿಯಬೇಕು.

ಮರದ ಕಾಂಡವು ಒಂದೇ ಆದರೂ ಅದಕ್ಕೆ ಅನೇಕ ಶಾಖೆಗಳೂ ಎಲೆಗಳೂ ಇರುವಂತೆ, ಸತ್ಯವೂ ಪರಿಪೂರ್ಣವೂ ಆದ ಧರ್ಮವು ಒಂದೇ; ಆದರೆ, ಮಾನವೀ ಮಾಧ್ಯಮದ ಮೂಲಕವಾಗಿ ಅದು ಬಹುರೂಪಧಾರಿಯಾಗಿರುತ್ತದೆ. ಸತ್ಯಧರ್ಮವು ಅನಿರ್ವಚನೀಯವಾಗಿದೆ. ಅಪರಿಪೂರ್ಣ ಮನುಷ್ಯರು ತಮಗೆ ತಿಳಿದ ಮಾತಿನಲ್ಲದನ್ನು ಹೇಳುತ್ತಾರೆ, ಅದರಂತೆಯೇ ಅಪರಿಪೂರ್ಣರಾದವರಿಂದ ಅದು ಅಪರಿಪೂರ್ಣವಾಗಿಯೇ ವ್ಯಾಖ್ಯಾನಿಸಲ್ಪಡುತ್ತದೆ. ಅಂದ ಮೇಲೆ ಯಾರ ವ್ಯಾಖ್ಯೆ ಸರಿಯಾದುದೆನ್ನಬಹುದು? ಪ್ರತಿಯೊಬ್ಬ ವ್ಯಾಖ್ಯಾಕಾರನೂ, ತನ್ನ ದೃಷ್ಟಿಯಿಂದ, ಸರಿಯಾಗಿ ಇರುತ್ತಾನೆ; ಎಲ್ಲರೂ ತಪ್ಪಾಗಲಿಕ್ಕೆ ಸಾಧ್ಯವಿಲ್ಲವಷ್ಟೆ. ಆದ್ದರಿಂದಲೇ ಸಹಿಷ್ಣುತೆ ಅವಶ್ಯವಾಗಿದೆ; ಅಂದರೆ ಸ್ವಧರ್ಮದ ಬಗೆಗೆ ಅಶ್ರದ್ಧೆ ಇರಬೇಕೆಂದಲ್ಲ, ಮತ್ತಷ್ಟು ಹೆಚ್ಚು ಶ್ರದ್ಧೆಯೂ, ಪವಿತ್ರತಮವಾದ ಪ್ರೇಮವೂ ಇರಬೇಕು. ಸಹಿಷ್ಣುತೆಯು ನಮಗೆ ಆಧ್ಯಾತ್ಮಿಕವಾದ ಅಂತರ್ದೃಷ್ಟಿಯನ್ನುಂಟು ಮಾಡಿಕೊಡುವುದು; ಅದಕ್ಕೂ ಧರ್ಮಾಂಧತೆಗೂ ಪರಸ್ಪರ ದಕ್ಷಿಣೋತ್ತರ ಧ್ರುವಗಳಷ್ಟು ಅಂತರವಿರುತ್ತದೆ. ಧರ್ಮದ ಸತ್ಯವಾದ ಜ್ಞಾನವು ಮತಮತಗಳ ನಡುವಣ ತಡೆಗಳನ್ನು ಕಿತ್ತೊಗೆಯುವುದು.

(ಯರವಾಡ ಮಂದಿರ, ಪು. 55)

* * *

ಸತ್ಯ – ಅಸ್ತೇಯ

ನಾನು ಸತ್ಯವನ್ನು ತಿಳಿದಿದ್ದೇನೆ, ನನ್ನ ಹೃದಯವು ಪ್ರೇಮದಿಂದ ತುಂಬಿದೆ – ಎಂದು ಹೇಳುವ ಮನುಷ್ಯನು ಸರ್ವಥಾ ಕಳ್ಳತನ ಮಾಡನು. ಆದರೂ, ತಿಳಿದೋ ತಿಳಿಯದೆಯೋ ನಾವೆಲ್ಲರೂ ಹೆಚ್ಚು ಕಡಿಮೆ ಕಳ್ಳತನದ ಅಪರಾಧಕ್ಕೆ ಗುರಿಯಾಗಿದ್ದೇವೆ.

ನಮಗೆ ಅವಶ್ಯವಿಲ್ಲದ ವಸ್ತುವನ್ನು ಸಮ್ಮತಿಯಿಂದಾದರೂ ಅನ್ಯರಿಂದ ತೆಗೆದುಕೊಳ್ಳುವುದು ಕಳ್ಳತನವೆನಿಸುವುದು. ನಮಗೆ ಅವಶ್ಯವಿಲ್ಲದ ಯಾವೊಂದು ವಸ್ತುವನ್ನಾದರೂ ನಾವು ಸ್ವೀಕರಿಸಕೂಡದು. ಈ ಬಗೆಯ ಕಳ್ಳತನದಲ್ಲಿ, ಸಾಮಾನ್ಯವಾಗಿ ಆಹಾರ ವಸ್ತುಗಳು ಬರುತ್ತವೆ. ನಮಗೆ ಅಗತ್ಯವಿಲ್ಲದ ಹಣ್ಣನ್ನಾಗಲೀ ಬೇಕಾದುದಕ್ಕಿಂತ ಹೆಚ್ಚಾದುದನ್ನಾಗಲೀ ತೆಗೆದುಕೊಳ್ಳುವುದು, ನನ್ನ ಮಟ್ಟಿಗೆ, ಕಳ್ಳತನವಾಗುವುದು. ನಮ್ಮ ನಿಜವಾದ ಅವಶ್ಯಕತೆಗಳು ನಮಗೆ ಯಾವಾಗಲೂ ತಿಳಿದಿರುವುದಿಲ್ಲ. ನಮ್ಮಲ್ಲಿ ಹೆಚ್ಚಿನವರು ಅವಶ್ಯಕವಾಗಿ ನಮ್ಮ ಬೇಡಿಕೆಗಳನ್ನು ಬೆಳೆಸಿಕೊಳ್ಳುತ್ತೇವೆ; ಈ ರೀತಿಯಿಂದ ನಮಗರಿಯದಂತೆಯೇ ಕಳ್ಳರಾಗಿಬಿಡುತ್ತೇವೆ. ಈ ವಿಷಯದಲ್ಲಿ ಸ್ವಲ್ಪ ಲಕ್ಷ್ಯ ಹಾಕಿದರೆ, ನಮ್ಮ ಎಷ್ಟೋ ಬೇಡಿಕೆಗಳನ್ನು ನಾವು ಇಲ್ಲದಂತೆ ಮಾಡಿಕೊಳ್ಳಬರುವುದು. ಅಸ್ತೇಯ (ಕಳ್ಳತನ ಮಾಡದಿರುವುದು)ದಿಂದ ಮನುಷ್ಯನು ತನ್ನ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಳ್ಳುತ್ತ ಹೋಗುವನು. ಈ ಜಗತ್ತಿನ ದುಃಖಕಾರಕವಾದ ಬಡತನವು, ಬಹುಮಟ್ಟಿಗೆ, ಈ ಅಸ್ತೇಯ ತತ್ವವನ್ನು ಮುರಿದದ್ದರಿಂದ ಉಂಟಾಗಿದೆ. ಇದೂ ಅಲ್ಲದೆ ಇದಕ್ಕಿಂತ ಹೆಚ್ಚು ಸೂಕ್ಷ್ಮವೂ ಅಪಮಾನಕರವೂ ಆದ ಮತ್ತೊಂದು ಬಗೆಯ ಕಳ್ಳತನ ಉಂಟು. ಅದಾವುದೆಂದರೆ, ಮಾನಸಿಕವಾಗಿ ಅನ್ಯರ ವಸ್ತುವನ್ನು ಬಯಸುವುದು. ಅಥವಾ ಅದರ ಮೇಲೆ ಕಾಮುಕ ದೃಷ್ಟಿ ಬೀರುವುದು.

ಅಸ್ತೇಯ ತತ್ತ್ವವನ್ನು ಪಾಲಿಸುವವನು ನಾಳಿನ ಚಿಂತೆಯನ್ನು ಹಚ್ಚಿಕೊಳ್ಳುವುದಿಲ್ಲ. ಈ 'ನಾಳಿನ ಚಿಂತೆ'ಯೇ ಅನೇಕ ಕಳ್ಳತನಗಳಿಗೆ ಮೂಲವಾಗಿದೆ. ಈ ಹೊತ್ತು ಅದರ ಬಗ್ಗೆ ನಮ್ಮಲ್ಲಿ ಆಸೆ ಹುಟ್ಟುತ್ತದೆ; ಅದನ್ನು ಹೇಗಾದರೂ ಮಾಡಿ ಪಡೆಯಲೇಬೇಕೆಂದು ನಾಳೆ ನಾವು ಹಂಚಿಕೆ ಹೂಡುತ್ತೇವೆ.

ದೃಶ್ಯ ವಸ್ತುಗಳಂತೆ ಅದೃಶ್ಯವಾದ ವಿಚಾರಗಳನ್ನೂ ಕಳಲು ಬರುವುದು. ಯಾವನು ತಾನೊಂದು ಹೊಸ ವಿಚಾರವನ್ನು ಹುಟ್ಟಿಸಿದೆನೆಂದು ಅಹಂಕಾರಪಡುತ್ತಾನೋ ಆತನು, ಆ ವಿಚಾರವನ್ನು ಬೇರೊಬ್ಬರಿಂದ ಪಡೆದುದಾದರೆ, ಅದೊಂದು "ವಿಚಾರ ಚೌರ್ಯ"ವೆನಿಸಿ, ಆತನೊಬ್ಬ ಕಳ್ಳನಾಗುವನು. ಜಗತ್ತಿನ ಇತಿಹಾಸದಲ್ಲಿ ಅನೇಕ ವಿದ್ವಾಂಸರು ಈ ಬಗ್ಗೆಯ ವಿಚಾರ ಚೌರ್ಯ ಮಾಡಿರುವುದು ಕಂಡುಬರುತ್ತಿದೆ.

ಆದ್ದರಿಂದ, ಅಸ್ತೇಯ ತತ್ತ್ವವನ್ನು ಪಾಲಿಸುವವನು ನಮ್ರನಾಗಿಯೂ, ವಿಚಾರಪರನಾಗಿಯೂ, ಜಾಗ್ರತನಾಗಿಯೂ ಸರಳ ನಡೆಯವನಾಗಿಯೂ ಇರಬೇಕು.

(ಯರವಾಡ ಮಂದಿರ, 1954, ಪು. 19)

* * *

ಸತ್ಯ - ಅಸಂಗ್ರಹ

ಸಂಗ್ರಹವೆಂದೊಡನೆ, ನಾಳೆಗಾಗಿ ಕೂಡಿಡುವುದೆಂಬ ಅರ್ಥವಾಗುತ್ತದೆ. ಸತ್ಯಶೋಧಕರನು, ಪ್ರೇಮತತ್ವದ ಅನುಯಾಯಿಯು, ನಾಳೆಗಾಗಿ ಏನನ್ನೂ ಸಂಗ್ರಹಿಸಿಟ್ಟುಕೊಳ್ಳಕೂಡದು. ದೇವರು ನಾಳೆಗಾಗಿ ಏನನ್ನೂ ಸಂಗ್ರಹಿಸಿಟ್ಟುಕೊಳ್ಳುವುದಿಲ್ಲ; ಆಯಾ ಕ್ಷಣಕ್ಕೆ ಬೇಕಾಗುವುದಕ್ಕಿಂತ ಹೆಚ್ಚಿನದೇನನ್ನೂ ಆತನು ಸೃಜಿಸುವುದಿಲ್ಲ. ನಮಗೆ ದೇವರ ದಯೆಯಲ್ಲಿ ಶ್ರದ್ಧೆ ಇದ್ದರೆ, ಆತನು ನಮ್ಮನ್ನು ಉಪವಾಸ ಬೀಳಗೊಡದೆ ನಮಗೆ ಬೇಕಾದುದನ್ನೆಲ್ಲ ಒದಗಿಸಿಕೊಡುವನೆಂದು ನಂಬಿಕೊಂಡಿರಬೇಕು. ಈ ಶ್ರದ್ಧೆಯಿಂದ ಬಾಳಿದ ಸಾಧುಸಂತರು ಇದನ್ನು ತಮ್ಮ ಅನುಭವದಿಂದ ದೃಢಪಡಿಸಿಕೊಂಡಿದ್ದಾರೆ. ದೇವರು ಮನುಷ್ಯನಿಗೆ ದಿನದಿನದ ಅನ್ನಾಹಾರಗಳನ್ನೊದಗಿಸಿ ಕೊಡುತ್ತಾನೆಂಬುದನ್ನು ಮರೆತುದೇ ಈ ಜಗತ್ತಿನ ಅಸಮಾನತೆಗಳಿಗೂ ದುಃಖಗಳಿಗೂ ಕಾರಣವಾಗಿದೆ. ಶ್ರೀಮಂತರಲ್ಲಿ ತಮಗೆ ಬೇಕಾದುದಕ್ಕಿಂತಲೂ ಹೆಚ್ಚಿನ ಸಂಗ್ರಹ ಇರುತ್ತದೆ; ಹಾಗೂ ಅವುಗಳು ಅನುಪಯುಕ್ತವಾಗಿ ಹಾಳಾಗಿಹೋಗುತ್ತಿವೆ. ಅದೇ ವೇಳೆಗೆ (ಲಕ್ಷಾಂತರ) ಜನರು ಹೊಟ್ಟೆಗಿಲ್ಲದೆ ಉಪವಾಸ ಬಿದ್ದು ಸಾಯುತ್ತಿದ್ದಾರೆ. ಪ್ರತಿಯೊಬ್ಬನೂ ತನಗೆ ಬೇಕಾಗುವಷ್ಟು ಇಟ್ಟುಕೊಂಡಲ್ಲಿ, ಯಾರಿಗೂ ಕೊರತೆಯಾಗದೆ, ಎಲ್ಲರೂ ನೆಮ್ಮದಿಯಿಂದ ಬಾಳುವಂತಾಗುವುದು. ಆದರೆ ವಸ್ತುಸ್ಥಿತಿ ಹಾಗಿರುವುದಿಲ್ಲ - ಬಡವರಂತೆ ಶ್ರೀಮಂತರೂ ಚಿಂತೆಯಿಂದ ತೊಳಲಾಡುತ್ತಾರೆ. ಬಡವನು ಲಕ್ಷಾಧೀಶನಾಗ ಬಯಸಿದರೆ, ಲಕ್ಷಾಧೀಶನು ಕೋಟ್ಯಾಧೀಶನಾಗಲು ಚಿಂತಿಸುತ್ತಾನೆ. ಸಾರ್ವತ್ರಿಕವಾದ ನೆಮ್ಮದಿಯನ್ನುಂಟುಮಾಡುವ ಸಲುವಾಗಿ ಶ್ರೀಮಂತರು ತ್ಯಾಗ ಮಾಡಿ, ಮಾರ್ಗದರ್ಶಕರಾಗಬೇಕು. ಶ್ರೀಮಂತರು ತಮಗೆ ಬೇಕಾಗುವಷ್ಟನ್ನೇ ಇಟ್ಟುಕೊಂಡು ಉಳಿದುದನ್ನು ತ್ಯಾಗಮಾಡಿದರೆ, ಉಪವಾಸ ಬೀಳುವವರಿಗೆ ಅನ್ನ ಹಾಕಿದಂತಾಗಿ, ಬಡವ-ಶ್ರೀಮಂತ ಇಬ್ಬರೂ ನೆಮ್ಮದಿಯಿಂದ ಬದುಕುವಂತಾಗುವುದು. ಅಸಂಗ್ರಹ ತತ್ವದ ಪೂರ್ಣ ಪಾಲನೆ ಮಾಡಲು ಮನುಷ್ಯನು ಹಕ್ಕಿಗಳಂತೆ ಮನೆಮಾರು,

ಅನ್ನವಸ್ತ್ರಗಳು ಬೇಕು, ಅದನ್ನೊದಗಿಸುವುದು ದೇವರ ಕೈಯಲ್ಲಿದೆಯೇ ಹೊರತು ಆತನ ಕೈಯಲ್ಲಿಲ್ಲ. ಕೇವಲ ಕೆಲವೇ ಜನರು ಈ ತತ್ವವನ್ನು ಅನುಷ್ಠಾನಕ್ಕೆ ತರಬಲ್ಲರು. ಆದರೂ ಸಾಮಾನ್ಯ ಉಪಾಸಕರಾದ ನಾವು ಇದು ನಮ್ಮ ಶಕ್ತಿಗೆ ಮೀರಿದ್ದೆಂದು ಸುಮ್ಮಗಿರಬಾರದು. ಆದರೂ ನಾವು ಧ್ಯೇಯವನ್ನು ಸದಾ ಕಣ್ಮುಂದಿಟ್ಟುಕೊಂಡು, ನಮ್ಮ ಸಂಗ್ರಹಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಿಕೊಳ್ಳುತ್ತ, ಅವುಗಳನ್ನು ಕಡಿಮೆಮಾಡಿಕೊಳ್ಳಲು ಯತ್ನಿಸಬೇಕು. ನಿಜವಾದ ನಾಗರಿಕತೆಯು ನಮ್ಮ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಳ್ಳುವುದರಲ್ಲಿದೆಯೇ ಹೊರತು ಹೆಚ್ಚಿಸಿಕೊಳ್ಳುವುದರಲ್ಲಿಲ್ಲ. ನಿಜವಾದ ಸುಖ-ಸಮಾಧಾನಗಳು ಇದರಿಂದಲೇ ಬೆಳೆಯುವುದಲ್ಲದೆ, ಸೇವಾಭಾವನೆಯೂ ಹೆಚ್ಚುವುದು.

ಹೀಗೆ ನಾವು ಪೂರ್ಣ ತ್ಯಾಗದ ಆದರ್ಶವನ್ನು ಸಮೀಪಿಸುತ್ತೇವೆ ಮತ್ತು ದೇಹವನ್ನು ಅದಿರುವಲ್ಲಿಯವರೆಗೆ ಸೇವೆಗಾಗಿಯೇ ಉಪಯೋಗಿಸುತ್ತೇವೆ. ಹಾಗೂ ಬದುಕಿರುವುದು ಸೇವೆಗಾಗಿಯೇ ಹೊರತು ಉಂಡು ನಲಿಯುವುದಕ್ಕಲ್ಲವೆಂಬುದನ್ನು ಕಲಿತುಕೊಳ್ಳುತ್ತೇವೆ. ನಮ್ಮ ಊಟ, ಉಡುಗೆ, ನಿದ್ರೆ-ಎಚ್ಚರ ಎಲ್ಲವೂ ಸೇವೆಗಾಗಿಯೇ ಇವೆ. ಅಂತಹ ಮನೋವೃತ್ತಿಯು ನಮಗೆ ನಿಜವಾದ ಸುಖವನ್ನು ಕೊಡುತ್ತದೆ ಮತ್ತು ಕಾಲಾಂತರದಲ್ಲಿ ದೈವೀ ಆನಂದದ ಸಾಕ್ಷಾತ್ಕಾರವನ್ನುಂಟುಮಾಡಿಕೊಡುತ್ತದೆ. ನಾವೆಲ್ಲರೂ ಈ ದೃಷ್ಟಿಯಿಂದಲೇ ನಮ್ಮನ್ನು ಪರೀಕ್ಷಿಸಿಕೊಳ್ಳೋಣ.

ಅಸಂಗ್ರಹತತ್ವವು ನಮ್ಮ ವಿಚಾರಗಳಿಗೂ ದೃಶ್ಯವಸ್ತುಗಳಿಗೂ ಅನ್ವಯಿಸಲ್ಪಡಬೇಕು.ಅನುಪಯುಕ್ತವಾದ ಜ್ಞಾನದಿಂದ ಮನಸ್ಸನ್ನು ತುಂಬಿಸಿಕೊಳ್ಳುವವನು ಆ ದಿವ್ಯ ತತ್ವವನ್ನು ಮುರಿಯುತ್ತಾನೆ. ದೇವರ ಕಡೆಗೆ ಒಯ್ಯದೆ, ಆತನಿಂದ ದೂರ ಮಾಡುವ ಎಲ್ಲ ಯೋಚನೆಗಳೂ ನಮ್ಮ ದಾರಿಯಲ್ಲಿ ತಡೆಗಳಾಗುತ್ತವೆ.

(ಯರವಾಡ ಮಂದಿರ, 1945, ಪು. 23–26)

* * *

ಸತ್ಯ-ಬ್ರಹ್ಮಚರ್ಯ

ಯಾವನು ಸತ್ಯಕ್ಕೆ ಅಂಟಿಕೊಂಡು ಅದನ್ನೇ ಉಪಾಸಿಸುತ್ತಾನೋ ಆತನು ಇತರ ಯಾವುದರಲ್ಲಾದರೂ ತನ್ನ ಸಾಮರ್ಥ್ಯವನ್ನು ಹಾಕಿದರೆ ಸತ್ಯಕ್ಕೆ ದ್ರೋಹ ಮಾಡಿದಂತಾಗುವುದು. ಅಂದಮೇಲೆ ಆತನು ವಿಷಯ ಸುಖಗಳಿಗೆ ಲಕ್ಷ್ಯಕೊಡುವುದಾದರೂ ಹೇಗೆ? ಸಂಪೂರ್ಣ ನಿಸ್ವಾರ್ಥತೆಯ ಅವಶ್ಯವಿರುವ ಸತ್ಯಸಾಕ್ಷಾತ್ಕಾರದಲ್ಲಿಯೇ ಯಾವನ ಎಲ್ಲ ಕರ್ಮಗಳೂ ಅರ್ಪಿತವಾಗಿವೆಯೋ ಆತನಿಗೆ ಮಕ್ಕಳನ್ನು ಹಡೆದು ಮನೆತನ ಸಾಗಿಸುವ ಸ್ವಾರ್ಥೋದ್ದೇಶಕ್ಕೆ ವೇಳೆ ಎಲ್ಲಿದೆ? ಸ್ವಾರ್ಥಸಾಧನೆ ಮತ್ತು ಸತ್ಯ ಸಾಕ್ಷಾತ್ಕಾರ ಎಂಬಿವು ಪರಸ್ಪರ ವಿರುದ್ಧಾರ್ಥಕವಾದ ಮಾತುಗಳೆಂಬುದು ಮೇಲಣ ವಿವರಣೆಯಿಂದ ಸ್ಪಷ್ಟವಾಗುವುದು.

ಇದನ್ನೇ ನಾವು ಅಹಿಂಸೆಯ ದೃಷ್ಟಿಯಿಂದ ನೋಡಿದಾಗ, ಸಂಪೂರ್ಣ ನಿಸ್ವಾರ್ಥತೆಯ ಹೊರತು ಅಹಿಂಸೆಯು ಅವಶ್ಯಕವೆಂಬುದು ವ್ಯಕ್ತವಾಗುವುದು.ಅಹಿಂಸೆಯೆಂದರೆ ವಿಶ್ವವ್ಯಾಪಕವಾದ ಪ್ರೇಮ. ಒಬ್ಬ ಗಂಡಸು ಅಥವಾ ಹೆಂಗಸು ತನ್ನ ಪ್ರೇಮವನ್ನು ಒಬ್ಬ ಹೆಂಗಸಿಗೇ ಅಥವಾ ಗಂಡಸಿಗೇ ಕೊಟ್ಟುಬಿಟ್ಟರೆ ಜಗತ್ತಿಗೆ ಕೊಡಲು ಉಳಿಯುವುದೇನು? ಆ ಪ್ರೇಮದ ಅರ್ಥವೆಂದರೆ ಇಷ್ಟೆ- "ಮೊದಲು ನಾವಿಬ್ಬರು; ಉಳಿದವರ ಪಾಡು ನಮಗೇಕೆ?" ಪತಿವ್ರತೆಯಾದ ಹೆಂಡತಿಯು ತನ್ನ ಪತಿಯ ಸಲುವಾಗಿ ಹೇಗೆ ತನ್ನ ಸರ್ವಸ್ವವನ್ನೂ ಅರ್ಪಿಸತಕ್ಕದ್ದೋ ಹಾಗೆ ಪತಿಯು ತನ್ನ ಪತ್ನಿಯ ಸಲುವಾಗಿ ತನ್ನ ಸರ್ವಸ್ವನ್ನೂ ಅರ್ಪಿಸತಕ್ಕದ್ದು. ಅಂತಹ ವ್ಯಕ್ತಿಗಳು ವಿಶ್ವಪ್ರೇಮದ ಔನ್ನತ್ಯಕ್ಕೇರುವುದಾಗಲೀ, ಮಾನವ ಕೋಟಿಯೆಲ್ಲವೂ ತನ್ನ ಕುಟುಂಬವೆಂದು ಬಗೆಯುವುದಾಗಲೀ ಸರ್ವಥಾ ಶಕ್ಯವಿಲ್ಲ. ಏಕೆಂದರೆ ಅವರು ತಮ್ಮ ಪ್ರೇಮದ ಸುತ್ತ ಒಂದು ಗೋಡೆ ಕಟ್ಟಿಕೊಂಡಿರುತ್ತಾರೆ. ಅಂತಹವರ ಸಂಸಾರವು ದೊಡ್ಡದಾದಂತೆಲ್ಲ ವಿಶ್ವಪ್ರೇಮದಿಂದವರು ಮತ್ತಷ್ಟು ದೂರಾಗುತ್ತಾರೆ. ಆದ್ದರಿಂದ ಅಹಿಂಸಾತತ್ವವನ್ನು ಅವಲಂಬಿಸುವವನು ವಿವಾಹ ಮಾಡಿಕೊಳ್ಳಲಾರನು; ಆತನು ಬೇರೆ ರೀತಿಯಿಂದ ವೈವಾಹಿಕ ಬಂಧದ ಭೋಗ ಪಡೆಯುವುದಂತೂ ಎಂದಿಗೂ ಕೂಡದು.

ಹಾಗಾದರೆ, ಈಗಾಗಲೇ ಮದುವೆಯಾದವರ ಗತಿ ಏನು? ಅವರಿಗೆ ಸತ್ಯಸಾಕ್ಷಾತ್ಕಾರವು ಎಂದಿಗೂ ಅಶಕ್ಯವೇ? ಮಾನವ ಕೋಟಿಯ ಸಲುವಾಗಿ ಅವರು ಸರ್ವಾರ್ಪಣ ಮಾಡಲು ಸಾಧ್ಯವಿಲ್ಲವೆ? ಅವರಿಗೂ ಒಂದು ದಾರಿ ಇದೆ.ಅವರು ಮದುವೆ ಆಗದವರಂತೆ ನಡೆದುಕೊಳ್ಳಬಹುದು. ಮದುವೆ ಮಾಡಿಕೊಂಡ ನನ್ನಂತಹ ಕೆಲವರೇ ಇದಕ್ಕೆ ಸಾಕ್ಷಿ. ನನಗೆ ತಿಳಿದಮಟ್ಟಿಗೆ ಅನೇಕರು ಈ ಪ್ರಯೋಗದಲ್ಲಿ ಯಶಸ್ವಿಯಾಗಿದ್ದಾರೆ. ವಿವಾಹಿತರಾದ ಸತಿಪತಿಯರು ತಾವು ಅಣ್ಣತಂಗಿಯರೆಂದು ತಿಳಿದು ನಡೆಯುತ್ತಿದ್ದರೆ, ಅವರು ಲೋಕಸೇವೆಗಾಗಿ ವಿವಾಹದಿಂದ ಬಿಡುಗಡೆ ಹೊಂದಿದವರಾಗುತ್ತಾರೆ. ಈ ಜಗತ್ತಿನ ಸಕಲ ಸ್ತ್ರೀಯರೂ ತನ್ನ ಸಹೋದರಿಯರು, ತಾಯಂದಿರು, ಪುತ್ರಿಯರು ಎಂಬ ಭಾವನೆಯೇ ಮನುಷ್ಯನನ್ನು ಉದಾತ್ತನನ್ನಾಗಿ ಮಾಡಿ, ಆತನ ಬಂಧನಗಳನ್ನು ಹರಿದೊಗೆಯುವುದು. ಇದರಲ್ಲಿ ಗಂಡನಾಗಲೀ, ಹೆಂಡತಿಯಾಗಲೀ ಏನನ್ನೂ ಕಳೆದುಕೊಳ್ಳುವುದಿಲ್ಲ. ಬದಲು ತಮ್ಮ ಮತ್ತು ತಮ್ಮ ಕುಟುಂಬದ ಶಕ್ತಿಯನ್ನು ಹೆಚ್ಚಿಸಿಕೊಳ್ಳುವರು. ಅವರ ಪ್ರೇಮವು ಕಾಮದ ಅಪವಿತ್ರತೆಯನ್ನು ಕಳೆದುಕೊಂಡು ಪರಿಶುದ್ಧವಾಗುವುದಲ್ಲದೆ, ಮತ್ತಷ್ಟು ಭದ್ರವಾಗುವುದು. ಕಾದ ಕೊಳೆಯು ಹೋದ ಮೇಲೆ ಸತಿಪತಿಯರಿಬ್ಬರೂ ಪರಸ್ಪರ ಹೆಚ್ಚು ಸಹಾಯಕರಾಗಬಹುದಲ್ಲದೆ, ಜಗಳಾಡುವ ಅವಕಾಶವೂ ಕಡಿಮೆಯಾಗುವುದು. ಪ್ರೇಮವು ಸ್ವಾರ್ಥದಿಂದ ಬದ್ಧವಾದಾಗಲೇ ಜಗಳಕ್ಕೆ ಅವಕಾಶ ಹೆಚ್ಚಾಗುವುದು.

ಮೇಲಿನ ವಿಚಾರಧಾರೆಯನ್ನು ಸರಿಯಾಗಿ ತಿಳಿದುಕೊಂಡಲ್ಲಿ, ದೈಹಿಕ ಬ್ರಹ್ಮಚರ್ಯವು ಅಷ್ಟೊಂದು ಕಷ್ಟವಾಗುವುದಿಲ್ಲ. ಅದು ಅಮುಖ್ಯವಾದ ಎರಡನೆಯ ಸ್ಥಾನ ಪಡೆಯುವುದು. ಇಂದ್ರಿಯ ಸುಖಕ್ಕಾಗಿ ಬೇಕೆಂತಲೇ ವೀರ್ಯನಷ್ಟ ಮಾಡಿಕೊಳ್ಳುವುದು ಎಂತಹ ಹುಚ್ಚುತನ! ಯಾವುದನ್ನು ಮನುಷ್ಯನ ದೇಹ ಮತ್ತು ಮನಸ್ಸಿನ ಶಕ್ತಿಯ ಅಭಿವೃದ್ಧಿಗಾಗಿ ದೇವರು ದಯಪಾಲಿಸಿದ್ದಾನೋ ಅದನ್ನು ಇಂದ್ರಿಯ ಸುಖಕ್ಕಾಗಿ ದುಂದು ಮಾಡುವುದೊಂದು ಮಹಾಪರಾಧ.ಅದರ ಈ ಬಗೆಯ ದುರ್ವಿನಿಯೋಗವು ಅನೇಕ ರೋಗಗಳಿಗೆ ಮೂಲವಾಗಿದೆ.

ಇತರ ವ್ರತಗಳಂತೆ ಬ್ರಹ್ಮಚರ್ಯವೂ ಕೂಡಾ ಮನೋವಾಕ್ಕಾಯಗಳಿಂದ ಆಚರಿಸಲ್ಪಡತಕ್ಕದ್ದು. ಗೀತೆಯೂ, ಅದನ್ನು ಪುಷ್ಟೀಕರಿಸುವ ನಮ್ಮ ಅನುಭವಗಳೂ, ಹೀಗೆನ್ನುತ್ತಿವೆ-ಯಾವನು ಮನಸ್ಸಿನಲ್ಲಿ ವಿಷಯವನ್ನು ತುಂಬಿಕೊಂಡು, ಹೊರಗಿನಿಂದ ನಿರ್ವಿಷಯಿಯಂತೆ ನಟಿಸುತ್ತಾನೋ ಆತನೊಬ್ಬ ಹುಚ್ಚು ಡಾಂಭಿಕ. ಮನಸ್ಸು ವಿಷಯದತ್ತ ಹರಿಯುತ್ತಿರುವಾಗ ದೇಹವನ್ನು ಅದರ ವಿರುದ್ಧವಾಗಿ ಬಂಧಿಸಿ ಹೋಗುವುದು ಅಪಾಯಕರವಾಗುವುದು. ಮನಸ್ಸು ಹರಿದತ್ತ ದೇಹವೂ ಹರಿಯಬೇಕಲ್ಲವೇ?

ಒಂದು ಸೂಕ್ಷ್ಮವನ್ನು ನಾವಿಲ್ಲಿ ಲಕ್ಷಿಸಲೇಬೇಕು. ಮನಸ್ಸನ್ನು ದುರ್ವಿಷಯಗಳತ್ತ ನಾವಾಗಿಯೇ ಹರಿಯಗೊಡುವುದು ಒಂದು ತೆರ; ನಾವು ಎಷ್ಟು ಪ್ರಯತ್ನಿಸಿದರೂ ಅದು ಅವನ್ನೆಲ್ಲ ಮೀರಿ ದುರ್ವಿಷಯಗಳತ್ತ ಹರಿಯುವುದು ಮತ್ತೊಂದು ತೆರ.ಮನಸ್ಸಿನ ಈ ದುರ್ವ್ಯಾಪಾರಗಳೊಡನೆ ನಾವು ಅಸಹಕಾರ ಮಾಡುತ್ತ ಹೋದರೆ, ಕೊನೆಗಾದರೂ ಜಯವು ನಮಗೇ ಕಟ್ಟಿಟ್ಟದ್ದು.

ಹೆಚ್ಚಿನ ವೇಳೆ ದೇಹವು ನಮ್ಮ ಸ್ವಾಧೀನವಾಗಿದ್ದರೂ ಮನಸ್ಸು ನಮ್ಮ ಸ್ವಾಧೀನದಲ್ಲಿರುವುದಿಲ್ಲ ಎಂಬುದನ್ನು ನಾವು ಜೀವನದಲ್ಲಿ ನಿಮಿಷ ನಿಮಿಷಕ್ಕೂ ಅನುಭವಿಸುತ್ತಿರುವೆವು. ದೇಹದ ಮೇಲಣ ಹಿಡಿತವನ್ನು ಎಂದಿಗೂ ಸಡಲಿಸಬಾರದು ಮತ್ತು ಮನಸ್ಸನ್ನು ಹಿಡಿತಕ್ಕೆ ತರಲು ಸತತ ಪ್ರಯತ್ನವನ್ನೂ ಮಾಡುತ್ತಿರಬೇಕು. ಇದಕ್ಕಿಂತ ಹೆಚ್ಚಿನದನ್ನಾಗಲೀ ಕಡಿಮೆಯದನ್ನಾಗಲೀ ನಾವು ಏನು ಮಾಡಬಲ್ಲೆವು? ನಾವು ಮನಸ್ಸಿಗೇ ಸ್ವಾತಂತ್ರ್ಯವಿತ್ತರೆ, ದೇಹ ಮನಸ್ಸುಗಳು ವಿರುದ್ಧ ದಿಸೆಗಳಲ್ಲಿ ಎಳೆಯುವುವು; ನಾವು ಡಾಂಭಿಕರಾಗುವೆವು. ಕೆಟ್ಟ ವಿಚಾರಗಳನ್ನು ಇದಿರಿಸಬೇಕೆಂಬ ಇಚ್ಛೆ ಇರುವಲ್ಲಿಯವರೆಗೆ ದೇಹ, ಮನಸ್ಸುಗಳು ಒಂದೇ ಆಗಿ ಸಾಗಬೇಕು.

ಬ್ರಹ್ಮಚರ್ಯವು ಬಹು ಕಠಿಣ ವ್ರತ, ಎಂದಿಗೂ ಸಾಧ್ಯವಲ್ಲ ಎಂದು ಭಾವಿಸಲ್ಪಡುತ್ತಿದೆ. ಈ ಭಾವನೆಗೆ ಕಾರಣವೇನೆಂದು ತಿಳಿಯಲೆತ್ನಿಸಿದರೆ ಬ್ರಹ್ಮಚರ್ಯ ಪದಕ್ಕೆ ಕೊಡಲ್ಪಟ್ಟ ಸಂಕುಚಿತಾರ್ಥವೇ ಕಾರಣವೆನ್ನಬೇಕು. ಕಾಮವಾಸನೆಯನ್ನು ತಡೆಗಟ್ಟುವುದೇ ಬ್ರಹ್ಮಚರ್ಯವೆಂದು ಭಾವಿಸಲ್ಪಟ್ಟಿದೆ. ಈ ಭಾವನೆಯು ಅಸಂಪೂರ್ಣವಾದದ್ದು, ತಪ್ಪಾದದ್ದು ಎಂದು

ನಾನು ತಿಳಿದಿದ್ದೇನೆ. ಬ್ರಹ್ಮಚರ್ಯವೆಂದರೆ ಎಲ್ಲ ಇಂದ್ರಿಯಗಳನ್ನೂ ಸ್ವಾಧೀನದಲ್ಲಿಟ್ಟುಕೊಳ್ಳುವುದು. ಯಾವನು ಯಾವುದಾದರೊಂದು ಇಂದ್ರಿಯವನ್ನು ತಡೆಗಟ್ಟಿ ಉಳಿದವುಗಳನ್ನು ತಮ್ಮಷ್ಟಕ್ಕೇ ಇರಗೊಡುತ್ತಾನೋ ಆತನ ಪ್ರಯತ್ನಗಳೆಲ್ಲವೂ ವಿಫಲವಾಗುವುದು.ಕಾಮಪ್ರಚೋದಕ ಮಾತುಕತೆಗಳನ್ನು ಕೇಳುತ್ತ, ಅಂತಹ ಚಿತ್ರಗಳನ್ನು ನೋಡುತ್ತ, ಅಂತಹ ಆಹಾರಗಳನ್ನು ಸೇವಿಸುತ್ತ ಮತ್ತು ಅಂತಹ ಸ್ಪರ್ಶಗಳನ್ನು ಪಡೆಯುತ್ತ, ಅದೇ ವೇಳೆಗೆ, ಉಳಿದ ಇಂದ್ರಿಯ ವ್ಯಾಪಾರವನ್ನು ಹಿಡಿತದಲ್ಲಿಟ್ಟುಕೊಳ್ಳುತ್ತೇನೆಂಬುದು, ಕೈಯನ್ನು ಮಾತ್ರವೇ ಬೆಂಕಿಗೆ ತಾಗಿಸಿ, ಅದರ ನೋವಿನಿಂದ ಇತರ ಅಂಗಗಳು ಸುಖವಾಗಿರುವಂತೆ ಮಾಡುತ್ತೇವೆಂಬಷ್ಟೇ ಪರಿಣಾಮಕರವಾಗುವುದು. ಆದ್ದರಿಂದ, ಒಂದು ಇಂದ್ರಿಯವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ನಿರ್ಧರಿಸುವವನು ಉಳಿದವುಗಳನ್ನೂ ಸ್ವಾಧೀನದಲ್ಲಿಟ್ಟುಕೊಳ್ಳಲು ನಿರ್ಧರಿಸಬೇಕಾಗುವುದು. ಬ್ರಹ್ಮಚರ್ಯದ ಸಂಕುಚಿತಾರ್ಥದಿಂದ ಬಹಳ ಹಾನಿಯಾಗಿದೆಯೆಂದು ನಾನು ಭಾವಿಸುತ್ತಲೇ ಬಂದಿದ್ದೇನೆ. ಏಕಕಾಲಕ್ಕೆ ಎಲ್ಲ ಇಂದ್ರಿಯಗಳನ್ನೂ ಹತೋಟಿಯಲ್ಲಿಡಲು ಪ್ರಯತ್ನಿಸುವುದು ಕ್ರಮಬದ್ಧ (ಸುಸಂಗತವೂ ಹೌದು, ಜಯಕಾರಕವೂ ಹೌದು).

ಬ್ರಹ್ಮಚರ್ಯದ ಮೂಲಾರ್ಥವನ್ನು ಜ್ಞಾಪಿಸಿಕೊಳ್ಳೋಣ. 'ಚರ್ಯ' ಎಂದರೆ ನಡುವಳಿಕೆ. 'ಬ್ರಹ್ಮಚರ್ಯ' ಎಂದರೆ, ಬ್ರಹ್ಮ-ಸಾಕ್ಷಾತ್ಕಾರಕ್ಕಾಗಿ ಅಂದರೆ ಸತ್ಯದ ಸಾಕ್ಷಾತ್ಕಾರಕ್ಕಾಗಿ ಅನುಸರಿಸುವ ನಡವಳಿಕೆ. ಈ ವಾಚ್ಯಾರ್ಥದಿಂದ 'ಇಂದ್ರಿಯ ನಿರೋಧ' ಎಂಬ ಧ್ವನ್ಯರ್ಥ(ತಾತ್ಪರ್ಯಾರ್ಥ)ವು ಹುಟ್ಟುವುದು. ಲೈಂಗಿಕ ಬ್ರಹ್ಮಚರ್ಯಕ್ಕಷ್ಟೇ ಬ್ರಹ್ಮಚರ್ಯ ಎಂದು ಹೇಳುವ ಅಪೂರ್ಣವಾದ ವ್ಯಾಖ್ಯೆಯನ್ನು ನಾವು ಸಂಪೂರ್ಣವಾಗಿ ಮರೆಯತಕ್ಕದ್ದು.

(ಯರವಾಡ ಮಂದಿರ, 1945, ಪು. 10)

* * *

ಸತ್ಯ ಮತ್ತು ಅಹಿಂಸೆಗಳ ಪ್ರಚಾರವು ಅವುಗಳ ಆಚರಣೆಯಿಂದಾಗುವಂತೆ, ಪುಸ್ತಕಗಳ ಮೂಲಕವಾಗಿ ಆಗಲಾರದು. ಆಚರಣೆಯ ಬಾಳು ಪುಸ್ತಕಗಳಿಗಿಂತ ಹೆಚ್ಚು ಪರಿಣಾಮಕಾರಿ.

(ಹ., 13-5, ಪು. 122)

ಸತ್ಯ – ಕರ್ಮಫಲ

ದೇವರು ಕೇವಲ ಒಂದು ವ್ಯಕ್ತಿಯೆಂದು ನಾನು ಭಾವಿಸುವುದಿಲ್ಲ. ಸತ್ಯವೇ ನನಗೆ ದೇವರು. ಈ ಲೋಕದಲ್ಲಿ ಅರಸನೂ ಆತನ ಕಾಯಿದೆಯೂ ಹೇಗೆ ಬೇರೆ ಬೇರೆಯಾಗಿ ಭಾವಿಸಲ್ಪಡುವುದಿಲ್ಲವೋ ಹಾಗೆ ನನಗೆ ದೇವರೂ ಆತನ ಕಾಯಿದೆಯೂ ಬೇರೆ ಬೇರೆಯಾಗಿ ತೋರುವುದಿಲ್ಲ. ಏಕೆಂದರೆ, ದೇವರು ಒಂದು ಭಾವನೆ; ತಾನೇ ಒಂದು ಧರ್ಮವಾಗಿದ್ದಾನೆ. ಆದ್ದರಿಂದ ಆತನು ಧರ್ಮವನ್ನುಲ್ಲಂಘಿಸುತ್ತಾನೆಂದು ಕಲ್ಪಿಸಲಿಕ್ಕೂ ಶಕ್ಯವಾಗದು. ಆತನು ನಮ್ಮ ಕರ್ಮಗಳನ್ನು ನಿಯಂತ್ರಿಸದೆ, ಅಲಿಪ್ತನಾಗಿರುತ್ತಾನೆ. ಆತನೂ ಆತನ ಧರ್ಮ(ಕಾಯಿದೆ)ವೂ ಸರ್ವ ವ್ಯಾಪಕವೂ ಸರ್ವನಿಯಾಮಕವೂ ಆಗಿರುವುದರಿಂದ, ನಮ್ಮೊಬ್ಬರ ಕರ್ಮಗಳನ್ನಷ್ಟೇ ಆತನು ನಿಯಂತ್ರಿಸುತ್ತಾನೆಂದು ಹೇಳಿದರೆ, ಆತನ ವ್ಯಾಪಕತ್ವವನ್ನು ಪರಿಮಿತಗೊಳಿಸಿದಂತಾಗುವುದು. ಆದ್ದರಿಂದ ಆತನು ನಮ್ಮ ಬೇಡಿಕೆಗಳನ್ನು ಮಾತ್ರವೇ ನೀಡುತ್ತಾನೆಂದು ನಾನು ಭಾವಿಸುವುದಿಲ್ಲ. ಆದರೂ, ಆತನು ನಮಗೆಲ್ಲರಿಗೂ ನಿಯಾಮಕನಾಗಿರುವನು. ಒಂದು ಹುಲ್ಲುಕಡ್ಡಿಯಾದರೂ ಆತನ ಇಚ್ಛೆಗೆ ವಿರುದ್ಧವಾಗಿ ಚಲಿಸಲಾರದೆಂಬುದನ್ನೂ ನಾನು ಅಕ್ಷರಶಃ ನಂಬುತ್ತೇನೆ. ನಾವು ಅನುಭವಿಸುತ್ತಿರುವ ಸ್ವತಂತ್ರ ಇಚ್ಛಾಶಕ್ತಿಯೆಂಬುದು ಹಡಗಿನಲ್ಲಿ ಕಿಕ್ಕಿರಿದು ಕೂತಿರುವ ಪ್ರವಾಸಿಯೊಬ್ಬನಿಗಿರುವ ಸ್ವಾತಂತ್ರ್ಯಕ್ಕಿಂತಲೂ ಕಡಿಮೆಯದಾಗಿದೆ. ಗೀತೆಯು ಹೇಳಿರುವಂತೆ, ಮನುಷ್ಯನಿಗೆ ಕರ್ಮ ಮಾಡಲು ಸ್ವಾತಂತ್ರ್ಯವಿದೆಯೇ ಹೊರತು ಅದರ ಫಲವನ್ನು ಪಡೆಯುವಾಗ ಸ್ವಾತಂತ್ರ್ಯವು ಇರುವುದಿಲ್ಲ. ತನ್ನ ಕರ್ಮದಿಂದ ಆತನು ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಬಹುದಷ್ಟೆ.

(ಹ., 23–2–40, ಪು. 55)

* * *

ಜೀವನವು ಬಹು ತೊಡಕಿನದು (ಜಟಿಲವಾದದ್ದು) ಹಾಗೂ ಅದರಲ್ಲಿ ಸತ್ಯ ಮತ್ತು ಅಹಿಂಸೆಗಳು ತೊಡಕಿನ ಸಮಸ್ಯೆಗಳಂತಿವೆ. ಅವುಗಳನ್ನು ಪೃಥಕ್ಕರಿಸಿ ತಿಳಿಯುವುದು ಬಹು ಕಠಿಣವಾಗುವುದು. ತಾಳ್ಮೆಯ ಪ್ರಯತ್ನದಿಂದಲೂ ಮೌನವಾದ ಪ್ರಾರ್ಥನೆಯಿಂದಲೂ ಸತ್ಯವನ್ನೂ ಅದನ್ನು ಪ್ರಯೋಗಕ್ಕೆ ತರುವ ಏಕೈಕ ಮಾರ್ಗವಾದ ಸತ್ಯಾಗ್ರಹ(ಆತ್ಮಶಕ್ತಿ) ವನ್ನೂ ಕಂಡುಕೊಳ್ಳಲು ಬರುವುದು. ನನ್ನ ಮಿತ್ರರಿಗೆ ನಾನು ಈ ರೀತಿ ಭರವಸೆ ಕೊಡಬಲ್ಲೆನು-ಸತತ ಪ್ರಯತ್ನ ಮತ್ತು ಮೌನ ಪ್ರಾರ್ಥನೆ ಎಂಬೀ ಇಬ್ಬರು ನಂಬಿಗೆಯ ಸಂಗಾತಿಗಳೊಂದಿಗೆ ನಾನು ಎಲ್ಲ ನೋವುಗಳನ್ನೂ ಸಹಿಸಿಕೊಳ್ಳುತ್ತ ಆಯಾಸಕರವೂ ಸುಂದರವೂ ಆದ ಈ ಸತ್ಯ ಪಥದಲ್ಲಿ ತಡವರಿಸುತ್ತ ನಡೆಯುತ್ತಿರುವೆನು. ಈ ಸತ್ಯಪಥವನ್ನು ಸಕಲ ಸತ್ಯಶೋಧಕರೂ ಅನುಸರಿಸಲೇಬೇಕಾಗುವುದು.

(ಯ.ಇ., 1-6-21, ಪು. 174)

* * *

ಸತ್ಯ ಸ್ವರೂಪ

ಬಣ್ಣಿಸಲು ಬಾರದ ನಿಗೂಢ ಶಕ್ತಿಯೊಂದು ಸಕಲವನ್ನೂ ವ್ಯಾಪಿಸಿಕೊಂಡಿದೆ. ಕಣ್ಣಿಗೆ ಕಾಣಿಸುವುದಿಲ್ಲವಾದರೂ ನನಗದು ಅನುಭವವೇದ್ಯವಾಗಿದೆ. ಈ ನಿಗೂಢ ಶಕ್ತಿಯು ಇಂದ್ರಿಯ ಗೋಚರವಾಗುವ ಯಾವುದನ್ನೂ ಹೋಲುವುದಿಲ್ಲವಾದ್ದರಿಂದ ಯಾವ ಪ್ರಮಾಣಕ್ಕೂ ಸಿಕ್ಕುವುದಿಲ್ಲವಾಗಿದೆ. ಅದು ತರ್ಕಾತೀತವಾಗಿದೆ.ಆದರೂ, ದೇವರ ಅಸ್ತಿತ್ವವನ್ನು ಒಂದು ಬಗೆಯಿಂದ ತರ್ಕಿಸಿ, ಸಿದ್ಧಾಂತಮಾಡಿ ತೋರಬಹುದಾಗಿದೆ.

(ಯ.ಇ., 11–10–1928, ಪು. 430)

* * *

ದೇವರೆಂಬುದು ನಮಗೆಲ್ಲರಿಗೂ ಅನುಭವವೇದ್ಯವಾದ, ಆದರೂ ನಾವು ಅರಿಯದಿರುವ, ಒಂದು ಅನಿರ್ವಚನೀಯ ವಸ್ತುವಾಗಿದೆ. ನನಗೆ ದೇವರು ಸತ್ಯ ಮತ್ತು ಪ್ರೇಮವಾಗಿದ್ದಾನೆ; ದೇವರು ನೀತಿಯಾಗಿದ್ದಾನೆ, ಸದಾಚಾರನಾಗಿದ್ದಾನೆ. ದೇವರು ನಿರ್ಭಯತೆಯಾಗಿದ್ದಾನೆ. ದೇವರು ಬೆಳಕಿನ ಮತ್ತು ಬಾಳಿನ ಮೂಲವಾಗಿದ್ದಾನೆ. ಆದರೂ ಆತನು ಇವೆಲ್ಲವನ್ನೂ ಮೀರಿದ್ದಾನೆ. ದೇವರು ಆತ್ಮಸಾಕ್ಷಿಯಾಗಿದ್ದಾನೆ. ಆತನು ನಾಸ್ತಿಕನ ನಾಸ್ತಿಕತೆಯೂ ಆಗಿದ್ದಾನೆ. ಆತನು ಅನಿರ್ವಚನೀಯನು, ಅತರ್ಕ್ಯನು. ಯಾರು ಅವನ ಸ್ಪರ್ಶವನ್ನು ಬಯಸುವರೋ ಅವರಿಗೆ ಆತನು ದೇಹ ಧರಿಸಿದ ದೇವರಾಗಿದ್ದಾನೆ. ಆತನು ಶುದ್ಧ ಸತ್ವವಾಗಿದ್ದಾನೆ. ಯಾರಿಗೆ ಶ್ರದ್ಧೆ ಇದೆಯೋ ಅವರಿಗೆ ಆತನು ಇದ್ದೇ ಇದ್ದಾನೆ. ಆತನು ಪರಿತಪಿಸುತ್ತಿದ್ದಾನೆ. ಆತನು ಸಹಿಷ್ಣುವಾಗಿದ್ದಾನೆ, ಆದರೆ ಭಯಂಕರನೂ ಆಗಿದ್ದಾನೆ; ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವಾದಿಯಾಗಿದ್ದಾನೆ. ಆತನಂಥ ಭೀಕರ ನಿರಂಕುಶ ಪ್ರಭುವೂ ಬೇರೆ ಯಾರೂ ಇಲ್ಲ. ನಾವು ಅಶಾಶ್ವತ, ಅವನೊಬ್ಬನೇ ಶಾಶ್ವತ.

(ಯ.ಇ., 5–3–1925, ಪು. 81)

* * *

ಸತ್ಯವೇ ದೇವರೆಂದು ನಾನೇಕೆ ತಿಳಿಯುತ್ತಿದ್ದೇನೆ? ಎಂದು ನೀವು ಕೇಳಿದ್ದೀರಿ. ಹಿಂದು ಧರ್ಮದಲ್ಲಿ ರೂಢಿಯಲ್ಲಿರುವ ದೇವರ ಸಹಸ್ರನಾಮಾವಳಿಯನ್ನು ನನಗೆ ಬಾಲ್ಯದಲ್ಲಿ ಪಠನಮಾಡಲು ಕಲಿಸಿದ್ದರು. ಆದರೆ, ದೇವರಿಗೆ ಈ ಸಾವಿರ ಹೆಸರುಗಳಷ್ಟೇ ಸಾಲದು. ದೇವರಿಗೆ, ಈ ಸೃಷ್ಟಿಯಲ್ಲೆಷ್ಟು ಜೀವಜಂತುಗಳುಂಟೋ ಅಷ್ಟು ಹೆಸರುಗಳಿವೆ ಎಂದು ನಾವು ನಂಬುತ್ತೇವೆ. ಅದು ಸತ್ಯವಾಗಿದೆ. ಆದ್ದರಿಂದಲೇ ನಾವು ದೇವರು ನಾಮಾತೀತ, ನಿರಾಕಾರ ಎನ್ನುತ್ತೇವೆ. ಆತನು ನಮ್ಮೊಡನೆ ಅನೇಕ ಭಾಷೆಗಳಲ್ಲಿ ಮಾತಾನಾಡುತ್ತಾನಾದ್ದರಿಂದ ಆತನು ಅನಿರ್ವಚನೀಯ ಎನ್ನುತ್ತೇವೆ. ಇಸ್ಲಾಂ ಧರ್ಮವನ್ನು ನಾನು ಅಭ್ಯಾಸ ಮಾಡತೊಡಗಿದಾಗ, ಅದರಲ್ಲಿಯೂ ದೇವರಿಗೆ ಅನೇಕ ಹೆಸರುಗಳಿರುವುದು ಗೊತ್ತಾಯಿತು. ದೇವರು ಪ್ರೇಮಸ್ವರೂಪವನೆಂದು ಹೇಳುವವರೊಂದಿಗೆ ನಾನೂ ಹಾಗೆಯೇ ಹೇಳುತ್ತೇನೆ. ಆದರೆ ನನ್ನ ಹೃದಯಾಂತರಾಳದಲ್ಲಿ ನಾನು ಹೇಳುತ್ತಿರುವುದೇನೆಂದರೆ, ದೇವರು, ಎಲ್ಲಕ್ಕಿಂತಲೂ ಹೆಚ್ಚಾಗಿ, ಸತ್ಯಸ್ವರೂಪನಾಗಿದ್ದಾನೆ. ಮನುಷ್ಯ ಜಿಹ್ವೆಯಿಂದ ಆತನನ್ನು ಅತ್ಯಂತವಾಗಿ ಬಣ್ಣಿಸುವುದೆಂದರೆ, ನನ್ನ ಮಟ್ಟಿಗೆ ಸತ್ಯಸ್ವರೂಪನಾಗಿದ್ದಾನೆ. ಆದರೆ ಎರಡು ವರ್ಷಗಳ ಹಿಂದೆ ನಾನು ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ, ಸತ್ಯವೇ ದೇವರು ಎಂದು ಹೇಳಿದೆನು. ದೇವರೇ ಸತ್ಯ, ಸತ್ಯವೇ ದೇವರು- ಎಂಬೀ ಎರಡು ಮಾತುಗಳೊಳಗಣ ಸೂಕ್ಷ್ಮಭೇದವನ್ನು ನೀವು ಗುರುತಿಸಬೇಕು. ಸತತ 50 ವರ್ಷಗಳ ಅವಿಶ್ರಾಂತವಾದ ಸತ್ಯಶೋಧಣೆಯ ಪರಿಣಾಮವಾಗಿಯೇ ನಾನು ಸತ್ಯವೇ ದೇವರು ಎಂಬ ಸಿದ್ಧಾಂತಕ್ಕೆ ಬಂದೆನು. ಆ ಸತ್ಯಕ್ಕೆ ತೀರ ಹತ್ತಿರದ ಹಾದಿಯೇ ಪ್ರೇಮ, ಎಂಬುದನ್ನೂ ನಾನು ಕಂಡುಹಿಡಿದೆನು. ಆಂಗ್ಲಭಾಷೆಯಲ್ಲಿ 'ಪ್ರೇಮ' ಎಂಬ ಪದಕ್ಕೆ ಅನೇಕ ಅರ್ಥಗಳಿದ್ದು, ಪಾಶವೀ ಪ್ರೇಮವು ಅವನತಿಗೆ ಒಯ್ಯಬಹುದಾಗಿದೆ. ಹಾಗೆಯೇ, ಪ್ರೇಮವನ್ನು ಅಹಿಂಸೆಯೆಂದು ಬಗೆದು, ಉಪಾಸನೆ ಮಾಡುವವರು ಈ ಜಗತ್ತಿನಲ್ಲಿ ಮಿತಪ್ರಮಾಣದಲ್ಲಿದ್ದಾರೆಂಬುದನ್ನೂ ನಾನು ಕಂಡುಕೊಂಡಿದ್ದೇನೆ. ಆದರೆ ಸತ್ಯದ ವಿಷಯದಲ್ಲಿ ಭಿನ್ನಾಭಿಮತವನ್ನು ನಾನೆಂದೂ ಕಂಡಿರುವುದಿಲ್ಲ. ಮತ್ತು ನಾಸ್ತಿಕರೂ ಕೂಡಾ ಸತ್ಯದ ಶಕ್ತಿಯನ್ನೂ ಅವಶ್ಯಕತೆಯನ್ನೂ ಶಂಕಿಸುವುದಿಲ್ಲ. ಸತ್ಯವನ್ನು ಕಾಣುವ ಉತ್ಕಟೇಚ್ಛೆಯಿಂದಲೇ ನಾಸ್ತಿಕರೂ ತಮ್ಮ ದೃಷ್ಟಿಗೆ ಸರಿದೋರಿದಂತೆ ದೇವರ ಅಸ್ತಿತ್ವವನ್ನು ಅಲ್ಲಗಳೆಯಲಿಕ್ಕೆ

ಓಂಜರಿಯುವುದಿಲ್ಲ. ಈ ದೃಷ್ಟಿಯಿಂದಲೇ ನಾನು ದೇವರೇ ಸತ್ಯ ಎನ್ನುವುದಕ್ಕಿಂತ ಸತ್ಯವೇ ದೇವರು ಎನ್ನುವುದೇ ಮೇಲೆಂದು ತಿಳಿದೆನು. ಈ ಸಂದರ್ಭದಲ್ಲಿ ನನಗೆ ಚಾರ್ಲ್ಸ್ ಬ್ರಾಡ್‌ಲಾರವರ ನೆನಪಾಗುತ್ತದೆ. ಅವರು ತಾವೊಬ್ಬ ನಾಸ್ತಿಕರೆಂದು ಆನಂದದಿಂದ ಹೇಳಿಕೊಳ್ಳುತ್ತಿದ್ದರು; ಆದರೆ ಅವರನ್ನು ಕೆಲಮಟ್ಟಿಗೆ ಬಲ್ಲವನಾದ ನಾನು, ಅವರನ್ನೆಂದೂ ನಾಸ್ತಿಕರೆಂದು ತಿಳಿಯಲಾರೆನು. ಅವರು ನಿರಾಕರಿಸುವರಾದರೂ, ಅವರೊಬ್ಬ ದೈವಭಕ್ತರೆಂದೇ ನಾನು ಕರೆಯುತ್ತೇನೆ. "ಪ್ರಿಯ ಬ್ರಾಡ್‌ಲಾರವರೇ, ನೀವು ಸತ್ಯದ ಭಕ್ತರು, ಆದ್ದರಿಂದ ನೀವು ದೇವರ ಭಕ್ತರು" ಎಂದು ನಾನು ಹೇಳಿದರೆ ಅವರ ಮುಖವು ಕೆಂಪಾಗಬಹುದು. ಆದರೆ, ಎಷ್ಟೋ ಯುವಕರ ಟೀಕೆಗಳನ್ನು ನಾನು ತಣ್ಣಗೆ ಮಾಡಿದಂತೆ ಅವರ ಟೀಕೆಯನ್ನೂ 'ಸತ್ಯವೇ ದೇವರು' ಎಂದು ಹೇಳಿ, ತಾನಾಗಿ ಶಮನವಾಗುವಂತೆ ಮಾಡಬಲ್ಲೆನು.

ಲಕ್ಷಾಂತರ ಜನರು ದೇವರ ಹೆಸರಿನಲ್ಲಿ ಹೆಸರಿಸಬಾರದಂತಹ ದುಷ್ಕರ್ಮಗಳನ್ನು ಮಾಡುತ್ತಿದ್ದಾರೆ. ಇದೊಂದು ದೊಡ್ಡ ಪೇಚಾಗಿದೆ. ಸತ್ಯದ ಹೆಸರಿನಲ್ಲಿ (ಅರ್ಥಾತ್ ಸತ್ಯವನ್ನು ಕಾಣುವ ಸಲುವಾಗೆಂದು) ವಿಜ್ಞಾನಿಗಳೂ ಪದೇ ಪದೇ ಕ್ರೂರಕೃತ್ಯಗಳನ್ನು ಮಾಡುವುದಿಲ್ಲವೆಂದಲ್ಲ. ಸತ್ಯ ಮತ್ತು ವಿಜ್ಞಾನದ ಹೆಸರಿನಲ್ಲಿ ಅನೇಕ ಪ್ರಾಣಿಗಳ ಅಂಗಾಂಗಗಳನ್ನು ಛಿದ್ರ ಮಾಡುತ್ತಿದ್ದಾರೆ. ಹೀಗೆ ದೇವರನ್ನು ಹೊಗಳುವವರ ದಾರಿಯಲ್ಲಿಯೂ ಅನೇಕಾನೇಕ ಕಷ್ಟಗಳು ಕಂಡುಬರುತ್ತಿವೆ. ಮನುಷ್ಯಶಕ್ತಿಗೆ ಮೀರಿದ ಒಂದು ವಸ್ತುವನ್ನು ಕಂಡುಕೊಳ್ಳಲೆತ್ನಿಸುವವರು ಸ್ವಾಭಾವಿಕವಾಗಿಯೇ ತಮ್ಮ ಪರಿಮಿತವಾದ ಮಾನವೀ ಬುದ್ಧಿಗನುಸಾರವಾಗಿಯೇ ಯತ್ನಿಸಬೇಕಾಗುವುದು.

ಹಿಂದೂ ತತ್ವಜ್ಞಾನದಲ್ಲಿ ಇನ್ನೂ ಒಂದು ಮಾತಿದೆ. ಅದೇನೆಂದರೆ, ಬ್ರಹ್ಮವೊಂದೇ (ದೇವರು) ಸತ್ಯ. ಜಗತ್ತೆಲ್ಲವೂ ಮಿಥ್ಯ. ಇಸ್ಲಾಮ್ ಧರ್ಮದ ಕಲ್ಮದಲ್ಲಿಯೂ ಇದೇ ಸಿದ್ಧಾಂತವನ್ನು ಬಣ್ಣಿಸಿ ಒತ್ತಿ ಹೇಳಿರುವುದು ಕಂಡುಬರುತ್ತಿದೆ. ಸಂಸ್ಕೃತದಲ್ಲಿ 'ನಿಜ'ಕ್ಕೆ ಸತ್ಯವೆಂಬ ಹೆಸರಿದ್ದು, 'ಸತ್' ಎಂದರೆ ಇರುವಿಕೆ ಎಂದೇ ಅರ್ಥವಿದೆ. ಈ ಎಲ್ಲ ಕಾರಣಗಳಿಂದಲೇ ನಾನು ಸತ್ಯವೇ ದೇವರು ಎಂಬ ಸಿದ್ಧಾಂತಕ್ಕೆ ಬಂದಿದ್ದೇನೆ; ಹಾಗೂ ಆ ಸಿದ್ಧಾಂತದಿಂದ ಅತ್ಯಂತ ತೃಪ್ತನಾಗಿದ್ದೇನೆ. ದೇವರನ್ನು ಸತ್ಯಸ್ವರೂಪವೆಂದು ತಿಳಿಯುವವರಿಗೆ ಪ್ರೇಮ ಅರ್ಥಾತ್ ಅಹಿಂಸೆಯು ಅನಿವಾರ್ಯವಾದ ಏಕೈಕ ಮಾರ್ಗವಾಗಿದೆ. ಪರಿಣಾಮದಲ್ಲಿ ದಾರಿಯೂ ಗುರಿಯಾಗಿ ಒಂದೇ ಎಂದು ನಾನು ನಂಬಿರುವುದರಿಂದ, 'ದೇವರೇ ಪ್ರೇಮ' ಎನ್ನಲು ಶಂಕಿಸಕೂಡದು.

ಹಾಗಾದರೆ, ಸತ್ಯವೆಂದರೇನು ಎಂದು ಪ್ರಶ್ನಿಸುತ್ತೀರಿ. ಇದು ಕಠಿಣವಾದ ಪ್ರಶ್ನೆಯಾದರೂ ನನ್ನ ಅಂತರ್ವಾಣಿಯು ಏನು ಹೇಳುವುದೋ ಅದೇ ಸತ್ಯವೆಂದು ನನ್ನ ಮಟ್ಟಿಗೆ ನಾನು ಉತ್ತರ ಹೇಳಿಕೊಂಡಿದ್ದೇನೆ. ವಿವಿಧ ಜನರು ವಿವಿಧ ರೀತಿಯಲ್ಲಿ, ಪರಸ್ಪರ ವಿರುದ್ಧವಾದವುಗಳನ್ನೂ ಕೂಡಾ ಸತ್ಯವೆಂದು ಹೇಗೆ ತಿಳಿಯುತ್ತಾರೆ ಎಂದು ನೀವು ಕೇಳುತ್ತೀರಿ. ಅದು ತಪ್ಪಲ್ಲ. ಮನುಷ್ಯನ ಮನಸ್ಸು ಅಸಂಖ್ಯಾತ ರೀತಿಗಳಲ್ಲಿ ಕಾರ್ಯ ಮಾಡುತ್ತಿದೆ. ಅಲ್ಲದೆ, ಎಲ್ಲರ ಮನಸ್ಸಿನ ಸಂಸ್ಕಾರವೂ ಒಂದೇ ತೆರನಾಗಿ ಇರುವುದಿಲ್ಲ; ಆದ್ದರಿಂದ ಒಬ್ಬನಿಗೆ ಸತ್ಯವೆನಿಸಿದ್ದು ಮತ್ತೊಬ್ಬನಿಗೆ ಅಸತ್ಯವೆನಿಸಬಹುದು. ಆದ್ದರಿಂದಲೇ, ಸತ್ಯದ ಪ್ರಯೋಗದಲ್ಲಿ ತೊಡಗಿದವರೆಲ್ಲರೂ, ಕೆಲವೊಂದು ನಿಯಮಗಳನ್ನು ಪಾಲಿಸುವುದು ಅತ್ಯಗತ್ಯವೆಂಬ ನಿರ್ಣಯಕ್ಕೆ ಬಂದಿದ್ದಾರೆ. ವಿಜ್ಞಾನಕ್ಕೆ ಸಂಬಂಧಿಸಿದ ಯಾವ ಪ್ರಯೋಗಗಳನ್ನು ಮಾಡಬೇಕಾದರೂ, ಆ ವಿಜ್ಞಾನಕ್ಕೆ ಸಂಬಂಧಿಸಿದ ಶಿಕ್ಷಣವನ್ನು ಅತ್ಯವಶ್ಯವಾಗಿ ಪಡೆದಿರಬೇಕಾಗುವುದಲ್ಲವೆ? ಹಾಗೆಯೇ, ಆಧ್ಯಾತ್ಮಿಕರಂಗದಲ್ಲಿ ಪ್ರಯೋಗ ನಡೆಸುವವರಿಗೂ ಕೆಲವೊಂದು ಪೂರ್ವಸಿದ್ಧತೆಯ ಅರ್ಹತೆಗಳಿರುತ್ತವೆ. ಆದ್ದರಿಂದ, ಅಂತರ್ವಾಣಿಯ ಮಾತೆತ್ತುವ ಮನುಷ್ಯನು ತನ್ನ ಅರ್ಹತೆಗಳೇನೆಂಬುದನ್ನು ಮೊತ್ತಮೊದಲು ಅರಿತುಕೊಳ್ಳಬೇಕಾಗುವುದು. ವೈಯಕ್ತಿಕವಾಗಿ ಯಾರು ಸತ್ಯಶೋಧನೆಯಲ್ಲಿ ತೊಡಗುತ್ತಾರೋ ಅವರ ಸತ್ಯ, ಬ್ರಹ್ಮಚರ್ಯ, ಅಹಿಂಸೆ, ಅಸ್ತೇಯ ಹಾಗೂ ದೀನತೆಗಳ ವ್ರತವನ್ನು ಆಚರಿಸಬೇಕಾಗುವುದೆಂಬುದನ್ನು ನಾವು ಅನುಭವದಿಂದ ಅರಿತುಕೊಂಡಿದ್ದೇವೆ. ಈ ಪಂಚವ್ರತವನ್ನು ಪಾಲಿಸದೇ ಸತ್ಯಶೋಧನೆಯ ಯಾತ್ರೆಗೆ ಹೊರಡಲು ಸಾಧ್ಯವೇ ಇಲ್ಲ. ಅದಕ್ಕೆ ಇನ್ನೂ ಅನೇಕ ಕರಾರುಗಳುಂಟು. ಆದರೆ ಅವನ್ನೆಲ್ಲ ಹೇಳುವ ಅಗತ್ಯವಿಲ್ಲ. ಈ ಅರ್ಹತೆಗಳನ್ನು ಗಳಿಸಿಕೊಳ್ಳದೇ ಯಾರೊಬ್ಬರೂ "ನನ್ನ ಮನಸ್ಸಾಕ್ಷಿ ಹೀಗೆ ಹೇಳುತ್ತದೆ" ಎನ್ನುವ ಅಧಿಕಾರವನ್ನು ಪಡೆಯಲಾರರು. ಅತ್ಯಂತ ನಮ್ರನಾದ ಹೊರತು ಸಾಧಕನು ಸತ್ಯವನ್ನು ಕಾಣಲಾರನು. ಸತ್ಯದ ಸಮುದ್ರದಲ್ಲಿ ಈಜಬಯಸುವವರು ಸಂಪೂರ್ಣ ನಿಸ್ವಾರ್ಥಿಗಳೂ ನಿರಭಿಮಾನಿಗಳೂ ಆಗಿರಬೇಕಾಗುವುದು. ಚಿತ್ತವೇಧಕವಾದ ಈ ಸತ್ಯಪಥದ ಕುರಿತು ನಾನು ಇದಕ್ಕಿಂತ ಹೆಚ್ಚಿಗೆ ಹೇಳಲಾರೆನು.

(ಯ.ಇ., ಪು. 427)

ಸತ್ಯದ ವಿಶ್ವರೂಪ

ದೇವರು ಅಸಂಖ್ಯಾತ ರೀತಿಯಲ್ಲಿ ವ್ಯಕ್ತನಾಗುವನಾದ್ದರಿಂದ ಆತನ ಗುಣಲಕ್ಷಣ ವರ್ಣನೆಗಳೂ ಅಸಂಖ್ಯಾತವಾಗಿವೆ. ಅವುಗಳನ್ನು ಕಂಡು ನಾನು ದಿಙ್ಮೂಢನಾಗುತ್ತೇನೆ, ವಿಸ್ಮಯದಿಂದ ಸ್ತಂಭಿತನಾಗುತ್ತೇನೆ. ಆದರೆ ನಾನು ದೇವರನ್ನು ಸತ್ಯರೂಪದಲ್ಲಿ ಪೂಜಿಸುತ್ತೇನೆ. ಆತನನ್ನು ನಾನಿನ್ನೂ ಕಂಡಿಲ್ಲವಾದರೂ ಹುಡುಕುತ್ತಲೇ ಇದ್ದೇನೆ. ಈ ಶೋಧನೆಯಲ್ಲಿ ನಾನು ನನಗೆ ಅತ್ಯಂತ ಪ್ರಿಯವೆನಿಸಿದ್ದನ್ನು ಕೂಡ ತ್ಯಾಗ ಮಾಡಲು ಸಿದ್ಧನಿದ್ದೇನೆ. ನನ್ನ ಪ್ರಾಣವನ್ನು ಅರ್ಪಿಸಬೇಕಾಗಿ ಬಂದರೂ ನಾನದಕ್ಕೆ ಸಿದ್ಧನಾಗಿದ್ದೇನೆ. ಆದರೆ, ಎಲ್ಲಿಯವರೆಗೆ ನನಗೆ ಈ ಪೂರ್ಣ ಸತ್ಯದ ಸಾಕ್ಷಾತ್ಕಾರವಾಗುವುದಿಲ್ಲವೋ ಅಲ್ಲಿಯವರೆಗೆ ಮನೋವಾಕ್ಕಾಯಗಳ ಸತ್ಯವನ್ನು ನಾನು ಆಚರಿಸುತ್ತಲೇ ಹೋಗುವೆನು. ಅದೇ ನನಗೆ ದಾರಿದೀಪ, ರಕ್ಷಣಾಕವಚ, ಢಾಲು! ಸತ್ಯದ ದಾರಿಯು ಖಡ್ಗದ ಬಾಯಿಯಂತೆ ಹರಿತವೂ ನೇರವೂ ಆಗಿದ್ದರೂ ನನ್ನ ಮಟ್ಟಿಗೆ ಅದು ಅತ್ಯಂತ ಸುಲಭವೂ ಬೇಗ ಗುರಿಮುಟ್ಟಿಸುವುದೂ ಆಗಿದೆ. ಈ ದಾರಿಗೆ ನಾನು ಅಚಲವಾಗಿ ಅಂಟಿಕೊಂಡಿರುವುದರಿಂದಲೇ ಪರ್ವತಾಕಾರವಾಗಿದ್ದ ನನ್ನ ತಪ್ಪುಗಳು ನನಗೆ ಕ್ಷುಲ್ಲಕವಾಗಿ ಕಂಡಿವೆ. ಏಕೆಂದರೆ ಅದು ನನ್ನನ್ನು ಅಪಾಯದಿಂದ ಬದುಕಿಸಿದೆಯಲ್ಲದೆ ನನ್ನ ಮಟ್ಟಿಗೆ ಪ್ರಗತಿ ಮಾಡಿದೆ. ಈ ಪ್ರಗತಿಯಲ್ಲಿ ಆಗಾಗ ನನಗೆ ಪೂರ್ಣಸತ್ಯದ, ದೇವರ, ಅಸ್ಪಷ್ಟ ದರ್ಶನ ದೊರೆತಿದೆ; ಹಾಗೂ ಆತನೊಬ್ಬನೇ ಸತ್ಯ. ಉಳಿದುದೆಲ್ಲ ಮಿಥ್ಯ ಎಂಬ ನಂಬಿಗೆಯೂ ದಿನೇ ದಿನೇ ಬಲಿಯುತ್ತ ಬಂದಿದೆ.

ನನಗೆ ಯಾವುದು ಸಾಧ್ಯವೋ ಅದು ಒಂದು ಹಸುಗೂಸಿಗೂ ಸಾಧ್ಯ ಎಂಬ ನಂಬಿಕೆಯೂ ನನ್ನಲ್ಲಿ ಬಲಿಯುತ್ತ ಬಂದಿದೆಯಲ್ಲದೆ, ಹಾಗೆನ್ನಲು ನನ್ನಲ್ಲಿ ಬಲವಾದ ಕಾರಣಗಳೂ ಇರುತ್ತದೆ. ಸತ್ಯಶೋಧನೆಯ ಸಲಕರಣೆಗಳು ಎಷ್ಟು ಸರಳವೋ ಅಷ್ಟೇ ಕಠಿಣವೂ ಆಗಿವೆ. ದುರಹಂಕಾರಿಗೆ ಅವುಗಳ ಉಪಯೋಗ ಅಸಾಧ್ಯವಾಗಿ ತೋರಿದರೆ, ನಿಷ್ಕಳಂಕ ಮಗುವಿಗೆ

ಅವು ತೀರ ಸುಲಭವಾಗಿ ತೋರಬಹುದು. ಸತ್ಯಶೋಧಕನು ತಾನು ಧೂಳಿಗಿಂತಲೂ ಕಡೆಯವನೆಂಬಷ್ಟರ ಮಟ್ಟಿನ ನಮ್ರನಾಗಿರಬೇಕು. ಜಗತ್ತು ಕಾಲಡಿಯ ಧೂಳನ್ನು ತುಳಿಯುತ್ತಿದೆಯಾದರೆ, ಸತ್ಯಶೋಧಕನು ಈ ಧೂಳಿನ ತುಳಿತವನ್ನೂ ಸಹಿಸಿಕೊಳ್ಳುವಷ್ಟು ನಮ್ರನಾಗಿರಬೇಕು.

ನನ್ನಂತಹ ನೂರಾರು ಮಂದಿ ಸತ್ತರೂ ಸಾಯಲಿ; ಆದರೆ ಸತ್ಯವು ಉಳಿಯಲಿ!

(ಆ.ಚ., ಮುನ್ನುಡಿ, ಪು. 67)

* * *

ಭಾರತೀಯರಲ್ಲಿ ತೀರ ನಿರ್ಗತಿಕರಾದವರ ದುಃಖವು ನನ್ನ ದುಃಖವಾಗಿರಲಿ. ಹಾಗೆಯೇ ಜಗತ್ತಿನಲ್ಲಿ ನನ್ನ ಅಧಿಕಾರವು ಎಲ್ಲರ ಅಧಿಕಾರಕ್ಕಿಂತಲೂ ಕನಿಷ್ಠವಾದದ್ದಾಗಿರಲಿ. ನನ್ನ ಆರೈಕೆಗೆ ಒಳಗಾದ ದೀನದರಿದ್ರರ ಪಾಪಗಳು ನನ್ನ ಪಾಪಗಳಾಗಲಿ. ಹೀಗೆ ವಿನಮ್ರತೆಯಿಂದ ಬಾಳುತ್ತ ನಾನು ಒಂದು ದಿನ ದೇವರನ್ನು –ಸತ್ಯವನ್ನು–ಮುಖಾಮುಖಿಯಾಗಿ ಕಾಣಲು ಆಶಿಸುತ್ತೇನೆ.

(ಯ.ಇ., ಪು. 422)

* * *

ನಾವು ಸಾವಿನ ಮಧ್ಯದಲ್ಲಿ ಬದುಕಿದ್ದರೂ ಸತ್ಯದ ಕಡೆಗೆ ತಡವರಿಸುತ್ತಲೇ ಸಾಗುತ್ತಿದ್ದೇವೆ. ಹೆಚ್ಚು ಕಡಿಮೆ ಎಲ್ಲ ದಿಕ್ಕುಗಳಿಂದಲೂ ಅಪಾಯಗಳು ನಮ್ಮನ್ನು ಬಳಸಿಕೊಂಡಿವೆ. ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಅಪಾಯ ಸುತ್ತಿಕೊಂಡಿರುವುದು ಒಳ್ಳೆಯದಕ್ಕೆಂದೇ ಭಾವಿಸಬೇಕು. ಏಕೆಂದರೆ, ಸಂಕಟಗಳ ಅರಿವಿದ್ದೂ, ಬದುಕು ಬಹು ಸೂಕ್ಷ್ಮವೆಂಬ ತಿಳಿವಿದ್ದೂ, ಮನುಷ್ಯನು ಎಲ್ಲ ಪ್ರಾಣಿಗಳ ಮೂಲವೂ ಒಂದೇ ಎಂಬುದನ್ನು ಅಲಕ್ಷಿಸುವುದು ಅಹಂಕಾರದ ಪರಮಾವಧಿಯಲ್ಲವೆ?

(ಯ.ಇ., 7–2–1927)

* * *

ಸತ್ಯ – ಪ್ರಾರ್ಥನೆ

ಸತ್ಯಕ್ಕೇ ಅಂಟಿಕೊಂಡಿರಬೇಕೆಂಬುದು ಆಶ್ರಮದ ಬೇರಾಗಿದ್ದರೆ, ಪ್ರಾರ್ಥನೆಯು ಆ ಬೇರಿನ ಮುಖ್ಯ ಆಹಾರವಾಗಿದೆ. ಆಶ್ರಮದ ಸಾಮೂಹಿಕ ಚಟುವಟಿಕೆಗಳು ದಿನಂಪ್ರತಿ ಬೆಳಗಿನ ಜಾವ 4–15 ಗಂಟೆಯಿಂದ 4–45ರ ವರೆಗಿನ ಸಾಮೂಹಿಕ ಪ್ರಾರ್ಥನೆಯಿಂದ ಶುರುವಾಗುತ್ತದೆ. ಮತ್ತು ಸಂಜೆ 7 ರಿಂದ 7–30ರ ವರೆಗಿನ ಸಾಯಂಪ್ರಾರ್ಥನೆಯಿಂದ ಮುಗಿಯುತ್ತವೆ. ಆಶ್ರಮ ಸ್ಥಾಪಿಸಿದಂದಿನಿಂದಲೂ, ನನಗೆ ತಿಳಿದಮಟ್ಟಿಗೆ, ಒಂದು ದಿನವಾದರೂ ಈ ಬಗೆಯ ದೇವರ ಪೂಜೆಯನ್ನು ತಪ್ಪಿಸಿದ್ದಿಲ್ಲ. ಕೆಲವೊಮ್ಮೆ ಮಳೆಯ ದೆಸೆಯಿಂದಾಗಿ ಪ್ರಾರ್ಥನೆಯ ಬಯಲಿನಲ್ಲಿ ಒಬ್ಬನೇ ವ್ಯಕ್ತಿಯೂ ಕೂಡ ಪ್ರಾರ್ಥನೆಗೆ ಬಂದದ್ದೂ ಉಂಟು. ಅನಾರೋಗ್ಯವೇ ಮೊದಲಾದ ಅನಿವಾರ್ಯ ಕಾರಣಗಳ ಹೊರತಾಗಿ ಆಶ್ರಮವಾಸಿಗಳು ಪ್ರಾರ್ಥನೆಗೆ ಬರತಕ್ಕದ್ದೆಂಬ ನಿರೀಕ್ಷಣೆ ಇಟ್ಟುಕೊಂಡಿದ್ದೆವು. ಈ ನಿರೀಕ್ಷಣೆಯು ಸಾಯಂಪ್ರಾರ್ಥನೆಯಲ್ಲಿ ಸಾಕಷ್ಟು ಚೆನ್ನಾಗಿ ಫಲಿಸುತ್ತಿದ್ದಿತಾದರೂ ಪ್ರಾತಃಪ್ರಾರ್ಥನೆಯಲ್ಲಲ್ಲ.

ಭಾರತದಂತಹ ದೇಶದಲ್ಲಿ ಬೆಳಿಗ್ಗೆ ಆದಷ್ಟು ಬೇಗ ಏಳುವುದು ಹಿತಕರವೆಂದೇ ನಾನು ನಂಬಿರುವೆನು. ವಾಸ್ತವಿಕವಾಗಿ ನೋಡಿದರೆ ಲಕ್ಷಾಂತರ ಜನರು ನಸುಕಿನಲ್ಲಿಯೇ ಏಳಬೇಕಾಗುತ್ತದೆ. ಒಕ್ಕಲಿಗನು ತಡವಾಗಿ ಎದ್ದರೆ ಬೆಳೆಯು ಹಾಳಾಗುವುದು. ನಸುಕಿನಲ್ಲೇ ಆತನು ತನ್ನ ದನಕರುಗಳಿಗೆ ಮೇವು ಕೊಟ್ಟು, ಆಕಳನ್ನು ಹಿಂಡಬೇಕಾಗುತ್ತದೆ. ಅಂದಮೇಲೆ ಸತ್ಯಶೋಧಕರೂ, ಲೋಕಸೇವಕರೂ, ಸನ್ಯಾಸಿಗಳೂ ಬೆಳಗಿನ 2–3 ಗಂಟೆಗೇ ಏಳಬೇಕು. ಹಾಗೆ ಏಳದಿದ್ದರೆ ಸೋಜಿಗವೆನಿಸಿತು. ಎಲ್ಲ ದೇಶಗಳಲ್ಲಿಯೂ ಭಗವದ್ಭಕ್ತರೂ ಒಕ್ಕಲಿಗರೂ ನಸುಕಿನಲ್ಲೇ ಏಳುತ್ತಾರೆ. ಭಗವದ್ಭಕ್ತರು ದೇವರ ಸ್ತೋತ್ರದಲ್ಲಿ ತೊಡಗಿದರೆ, ಒಕ್ಕಲಿಗರು ತಮಗೂ ಜಗತ್ತಿಗೂ ಅನ್ನ ನೀಡುವ ಕೃಷಿ ಕಾರ್ಯದಲ್ಲಿ ತೊಡಗುತ್ತಾರೆ. ನನ್ನ ಮಟ್ಟಿಗೆ

ಅವರಿಬ್ಬರೂ ದೇವರ ಪೂಜಕರೇ. ಭಗವದ್ಭಕ್ತರು ಬುದ್ಧಿಪೂರ್ವಕವಾಗಿಯೇ ದೇವರ ಪೂಜೆ ಮಾಡಿದರೆ, ಒಕ್ಕಲಿಗರು ತಮ್ಮ ಕೆಲಸದಿಂದ ಲೋಕವನ್ನು ಬದುಕಿಸುತ್ತ ತಮಗರಿಯದಂತೆಯೇ ದೇವರ ಪೂಜೆ ಮಾಡುತ್ತಾರೆ. ಅವರು ಗದ್ದೆಯ ಕೆಲಸವನ್ನು ಬಿಟ್ಟುಕೊಟ್ಟು ದೇವಧ್ಯಾನದಲ್ಲಿ ತೊಡಗಿಬಿಟ್ಟರೆ, ಸ್ವಧರ್ಮ ಬಾಹಿರರಾಗಿ, ತಮಗೂ ಲೋಕಕ್ಕೂ ಹಾನಿ ಮಾಡಿದಂತಾಗುವುದು.

ಒಕ್ಕಲಿಗರನ್ನು ದೈವಭಕ್ತರೆಂದು ನಾವು ತಿಳಿಯಲಿ, ಬಿಡಲಿ, ಅವರು ಬೆಳಗಿನ ಜಾವದಲ್ಲೇ ಏಳುತ್ತಾರೆಂದ ಮೇಲೆ, ಸತ್ಯೋಪಾಸಕನಾಗಲಿ, ಲೋಕಸೇವಕನಾಗಲಿ ತಡವಾಗಿ ಏಳುವುದು ಸರಿಯೆ? ಆಶ್ರಮದಲ್ಲಿ ನಾವು ಕೆಲಸವನ್ನೂ ಪೂಜೆಯನ್ನು ಒಂದುಗೂಡಿಸುತ್ತೇವೆ. ಆದ್ದರಿಂದ, ಎಷ್ಟೇ ಅನಾನುಕೂಲವಾಗಲಿ, ಸಶಕ್ತರಾದ ಆಶ್ರಮವಾಸಿಗಳೆಲ್ಲರೂ ಬೆಳಗಿನ ಜಾವಕ್ಕೇ ಏಳಬೇಕೆಂಬುದು ನನ್ನ ದೃಢಾಭಿಪ್ರಾಯ. ಬೆಳಗಿನ 4 ಗಂಟೆಯೆಂದರೆ ತೀರ ಬೇಗೆನಿಸುವುದಿಲ್ಲ. ಅಷ್ಟರೊಳಗೇ ಎಲ್ಲರೂ ಎದ್ದು ತಮ್ಮ ತಮ್ಮ ಕರ್ತವ್ಯಗಳಲ್ಲಿ ತೊಡಗಿರಬೇಕು.

(ಆ.ನ., ಪು. 22–24)

* * *

ಸತ್ಯ – ಶಿಷ್ಟಾಚಾರ

ನಾವು ಸಾಮಾನ್ಯವಾಗಿ ತಿಳಿದಿರುವಂತೆ ಸುಳ್ಳಾಡದೆ ಇರುವುದಷ್ಟೇ ಸತ್ಯವಲ್ಲ; "ಪ್ರಾಮಾಣಿಕತೆಯೇ ಅತ್ಯುತ್ತಮ ಉಪಾಯ" ಎಂಬ ಮಾತು ಸೂಚಿಸುವಂತೆ, ಲಾಭದಾಯಕವಾಗಿರದಿದ್ದರೆ ಸತ್ಯವನ್ನು ಬಿಡಬಹುದು-ಎಂದರ್ಥವಲ್ಲ. ಎಂತಹ ಬೆಲೆ ತೆತ್ತಾದರೂ ನಾವು ಜೀವನವನ್ನು ಸತ್ಯದಿಂದಲೇ ನಡೆಸತಕ್ಕದ್ದು-ಎಂಬುದೇ ಸತ್ಯಕ್ಕೆ ನಾನಿಟ್ಟುಕೊಂಡಿರುವ ಅರ್ಥವಾಗಿದೆ. ಇದನ್ನು ಸ್ಪಷ್ಟೀಕರಿಸಲು ನಾನು ಪುರಾಣ ಪ್ರಸಿದ್ಧ ಪ್ರಹ್ಲಾದನ ಜೀವನವನ್ನೇ ದೃಷ್ಟಾಂತವಾಗಿಟ್ಟುಕೊಳ್ಳುವೆನು. ಸತ್ಯದ ಸಲುವಾಗಿ ಆತನು ತನ್ನ ತಂದೆಯನ್ನೂ ಧೈರ್ಯದಿಂದ ಎದುರಿಸಿದನು. ಮತ್ತು ಸತ್ಯವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಆತನು ತನ್ನ ತಂದೆಗಾಗಲಿ ತಂದೆಯ ಅಪ್ಪಣೆಯ ಮೇರೆಗೆ ಮುಂದೆ ಬಂದ ವಿರೋಧಿಗಳಿಗಾಗಲೀ ಹೊಡೆತಕ್ಕೆ ಪ್ರತಿಹೊಡೆತವೆಂಬ ಪ್ರತೀಕಾರ ಮಾಡದೇ, ಪ್ರಾಣಾರ್ಪಣ ಮಾಡಲಿಕ್ಕೂ ಹಿಂಜರಿಯಲಿಲ್ಲ. ಅಷ್ಟೇ ಅಲ್ಲ, ಆತನು ಹಿಂಸೆಯನ್ನು ತಪ್ಪಿಸಿಕೊಳ್ಳಲಿಕ್ಕೂ ಯತ್ನಿಸಲಿಲ್ಲ. ಅದರ ಬದಲು ಆತನು ಮುಗುಳುನಗುತ್ತಲೇ ಅನೇಕಾನೇಕ ಚಿತ್ರಹಿಂಸೆಗಳನ್ನು ತಾಳಿಕೊಂಡನು. ಅದರಿಂದ ಕಟ್ಟಕಡೆಗೆ ಸತ್ಯವೇ ಜಯಿಸಿತು. ತನ್ನ ಬಾಳಿನಲ್ಲೇ ಒಂದು ದಿನ ಸತ್ಯದ ನಿರ್ದೋಷತ್ವವನ್ನು ಎತ್ತಿ ತೋರಿಸುವಂತಾಗುವುದೆಂಬ ತಿಳುವಳಿಕೆಯಿಂದಷ್ಟೇ ಆತನು ಆ ಚಿತ್ರ ಹಿಂಸೆಗಳನ್ನು ಸಹಿಸಿಕೊಂಡದ್ದಲ್ಲ! ಏಕೆಂದರೆ ಅದು ಆಗಲೇ ಸ್ಪಷ್ಟವಾಗಿದ್ದಿತು; ಚಿತ್ರಹಿಂಸೆಯಲ್ಲೇ ಮರಣ ಸಂಭವಿಸುತ್ತಿದ್ದರೂ ಆತನು ಸತ್ಯವನ್ನು ಬಿಟ್ಟುಕೊಡುತ್ತಿದ್ದಿಲ್ಲ. ಅದೇ ಸತ್ಯ. ಅದನ್ನೇ ನಾನು ಅನುಸರಿಸಲಿಚ್ಛಿಸುವುದು.

ನಿನ್ನೆ ಒಂದು ಘಟನೆ ನನ್ನ ಲಕ್ಷ್ಯವನ್ನೆಳೆಯಿತು. ಅದೊಂದು ಕ್ಷುಲ್ಲಕ ಘಟನೆಯಾಗಿದ್ದರೂ, ಗಾಳಿ ಎತ್ತ ಬೀಸುತ್ತದೆಂಬುದನ್ನು ಹುಲ್ಲುಕಡ್ಡಿಗಳು ತೋರಿಸುವಂತೆ, ಇಂತಹ ಪುಟ್ಟ ಘಟನೆಗಳು ನಮ್ಮ ಒಲವನ್ನು ತೋರಿಸುತ್ತವೆ. ಆ ಘಟನೆ ಹೀಗಿದ್ದಿತು:- ನನ್ನೊಬ್ಬನೊಡನೆಯೇ ಮಾತಾಡಬಯಸಿದ ಒಬ್ಬ ಮಿತ್ರನೊಡನೆ ನಾನು ಸಂಭಾಷಿಸುತ್ತಿದ್ದೆ; ಅದೊಂದು ಖಾಸಗಿ ಸಂಭಾಷಣೆಯಾಗಿದ್ದಿತು. ಮತ್ತೊಬ್ಬ ಮಿತ್ರನು ಆಗ ಬಂದನು. ತಾನು ಬಂದದ್ದರಿಂದ ತೊಂದರೆಯಾಯಿತೇ ಎಂದು ಆತನು

ಮರ್ಯಾದೆಯಿಂದ ಕೇಳಿದನು. ಆಗ ನನ್ನೊಡನೆ ಮಾತಾಡುತ್ತಿದ್ದ ಮಿತ್ರನು "ಓ ಹೋ! ಇಲ್ಲಿ ಯಾವ ಗುಟ್ಟೂ ಇಲ್ಲ" ಎಂದನು. ನಾನು ಸ್ವಲ್ಪ ಬೆಚ್ಚಿಬಿದ್ದೆನು. ಏಕೆಂದರೆ ಅದೊಂದು ಖಾಸಗಿ ಸಂಭಾಷಣೆಯಾಗಿದ್ದುದರಿಂದಲೇ ಆ ಮಿತ್ರನು ನನ್ನೊಬ್ಬನನ್ನೇ ಬದಿಗೊಯ್ದಿದ್ದನು. ಆದರೆ ಆತನು ಸಭ್ಯಾಚಾರಕ್ಕನುಸರಿಸಿ ನನ್ನ ದೃಷ್ಟಿಯಿಂದ ತುಸು ಅತಿಯಾಯಿತು. ಅದರಲ್ಲೇನೂ ರಹಸ್ಯವಿಲ್ಲವೆಂದೂ, ಆ ಮಿತ್ರನೂ ಅದರಲ್ಲಿ ಭಾಗವಹಿಸಬಹುದೆಂದೂ ಹೇಳಿಬಿಟ್ಟನು. ನಾನು ಸೂಚಿಸುವುದೇನೆಂದರೆ, ನನ್ನ ದೃಷ್ಟಿಯಿಂದ ಇದು ಸತ್ಯಕ್ಕೆ ದೂರಾದ್ದು. ಆ ಮಿತ್ರನು ಅತ್ಯಂತ ನಯವಾಗಿಯೇ, "ಹೌದು, ನೀವು ಹೇಳಿದಂತೆ ಇದು ಖಾಸಗಿ ಸಂಭಾಷಣೆಯಾಗಿದೆ. ನೀವು ಇಲ್ಲಿರುವುದು ಸರಿಯಾಗದು" ಎಂದು ಆ ಮನುಷ್ಯನಿಗೆ ಅವಮಾನವಾಗದಂತೆ ಹೇಳಬಹುದಿತ್ತು. ಆತನೂ ಸಭ್ಯಾಚಾರ ಬಲ್ಲವನಾದ್ದರಿಂದ ತಪ್ಪು ತಿಳಿದುಕೊಳ್ಳುತ್ತಿದ್ದಿಲ್ಲ. ಈ ಘಟನೆಯು ಜನಾಂಗದ ಸಭ್ಯ ಶಿಷ್ಟಾಚಾರವನ್ನು ಎತ್ತಿತೋರುವುದೆಂದು ಹೇಳಬಹುದು. ಆದರೆ, ಇದು ಸಭ್ಯತೆಯ ಅತಿರೇಕವಾಗುವುದೆಂದು ನನ್ನ ಅಭಿಪ್ರಾಯ. ಕೇವಲ ಸಭ್ಯತೆಗಾಗಿಯೇ ನಾವು ಹೀಗೆ ನಡೆಯುತ್ತ ಹೋದರೆ ನಾವು ಡಾಂಭಿಕ ಜನಾಂಗವಾಗುವೆವು. ಒಬ್ಬ ಆಂಗ್ಲ ಮಿತ್ರನೊಡನೆ ನಡೆಸಿದ ಸಂಭಾಷಣೆಯೊಂದು ನನ್ನ ನೆನಪಿಗೆ ಬರುವುದು. ಆತನು ಕೆಲಮಟ್ಟಿಗೆ ಅಪರಿಚಿತನಾಗಿದ್ದವನು. ಆತನು ಒಂದು ಕಾಲೇಜಿನ ಮುಖ್ಯಾಚಾರ್ಯನಾಗಿದ್ದು, ಭಾರತದಲ್ಲಿ ಅನೇಕ ವರ್ಷ ನೆಲಸಿದವನು. ನಮ್ಮ ಮನಸ್ಸಿನಲ್ಲಿ 'ಬೇಡ' ಎಂತಿದ್ದರೆ ಬಾಯಲ್ಲಿಯೂ 'ಬೇಡ' ಎನ್ನಲು ನಾವು ಒಪ್ಪುತ್ತೇವೋ ಹೇಗೆಂಬುದನ್ನು ನನ್ನ ಹಿಂದಿನ ಮಾತುಗಳ ಟಿಪ್ಪಣಿಯೊಡನೆ ತುಲನೆ ಮಾಡಿ ಪರೀಕ್ಷಿಸಲು ಆತನು ಬಂದಿದ್ದನು. ಆತನ ಪ್ರಶ್ನೆಗೆ ನಾನು ಕೂಡಲೇ "ಹೌದು" ಎಂದೆನು. ಎಷ್ಟೋ ವೇಳೆ ನಾವು, ಅನ್ಯರೊಡನೆ ಮಾತಾಡುವಾಗ ಅವರಿಗೆ ಅಸಮಾಧಾನ ಮಾಡಬಾರದೆಂದು "ಇಲ್ಲ, ಬೇಡ" ಎಂದು ಸ್ಪಷ್ಟವಾಗಿಯೂ ಧೈರ್ಯದಿಂದಲೂ ಹೇಳಲು ಹಿಂಜರಿಯುವುದುಂಟು. ಈ ಆಶ್ರಮದಲ್ಲಿ ನಾವು ಒಂದು ನಿಯಮ ಇಟ್ಟುಕೊಂಡಿದ್ದೇವೆ–ನಮ್ಮ ಮನಸ್ಸಿನಲ್ಲಿ "ಬೇಡ"ವೆಂತಿದ್ದರೆ, ಪರಿಣಾಮದ ಕಡೆಗೆ ಲಕ್ಷ್ಯಗೊಡದೆ, ಬಾಯಿಂದಲೂ 'ಬೇಡ' ಎನ್ನತಕ್ಕದ್ದು. ಇದು ನಮ್ಮ ಪ್ರಥಮ ನಿಬಂಧನೆ.

(ಅ.ನ. – ಪು. 126–130)

ಸತ್ಯ – ಪ್ರೇಮ

ಪ್ರೇಮಶಕ್ತಿಯು ಆತ್ಮಶಕ್ತಿ ಅಥವಾ ಸತ್ಯಶಕ್ತಿಯಂತೆಯೇ ಇದೆ. ಹೆಜ್ಜೆಹೆಜ್ಜೆಗೂ ನಾವಿದನ್ನು ಕಾಣಬಹುದು. ಪ್ರೇಮದ ಅಥವಾ ಸತ್ಯದ ಶಕ್ತಿ ಇಲ್ಲದಿದ್ದರೆ ಸೃಷ್ಟಿಯು ತತ್‌ಕ್ಷಣವೇ ಇಲ್ಲದಂತಾದೀತು. ಈ ಶಕ್ತಿಯ ಆಚರಣೆಯನ್ನವಲಂವಬಿಸಿಯೇ ಜನರು ಬದುಕಿದ್ದಾರೆ. ಲಕ್ಷಾಂತರ ಕುಟುಂಬಗಳು ದಿನನಿತ್ಯದ ಸಣ್ಣಪುಟ್ಟ ಜಗಳಗಳೆಲ್ಲವೂ ಈ ಶಕ್ತಿಯನ್ನು ಕಂಡೊಡನೆಯೇ ಕಣ್ಮರೆಯಾಗಿಬಿಡುತ್ತದೆ. ಅದರಿಂದಾಗಿಯೇ ಜನಾಂಗಗಳು ಶಾಂತಿಯಿಂದ ಬದುಕುತ್ತಿವೆ. ಇತಿಹಾಸವು ಇದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಲಿಲ್ಲ. ಈ ಆತ್ಮಶಕ್ತಿ ಅಥವಾ ಪ್ರೇಮಶಕ್ತಿಗೆ ಬಂದೊದಗಿರುವ ತಡೆಗಳ ಕತೆಯೇ ಇತಿಹಾಸವೆನಿಸಿದೆ. ಇಬ್ಬರು ಸಹೋದರರು ಜಗಳಾಡುತ್ತಾರೆ; ಒಬ್ಬನು ಪಶ್ಚಾತ್ತಾಪಪಟ್ಟು, ತನ್ನಲ್ಲಿ ಸುಪ್ತವಾಗಿದ್ದ ಪ್ರೇಮವನ್ನು ಎಚ್ಚರಿಸುತ್ತಾನೆ; ಪುನಃ ಅವರಿಬ್ಬರೂ ಶಾಂತಿಯಿಂದ ಬದುಕತೊಡಗುತ್ತಾರೆ. ಇದನ್ನು ಯಾರೂ ಲಕ್ಷಿಸುವುದಿಲ್ಲ. ಆದರೆ ಈ ಇಬ್ಬರು ಸಹೋದರರು ತಮ್ಮ ಜಗಳವನ್ನು ವಕೀಲರು ಇಲ್ಲವೇ ಬೇರೆ ಕಾರಣಮುಖೇನ ನ್ಯಾಯಾಸ್ಥಾನಕ್ಕೆ ಒಯ್ದರೆ ಅಥವಾ ಬಡಿದಾಟಕ್ಕಿಳಿಸಿದರೆ–ಇದು ಹಿಂಸಾಮಾರ್ಗ–ಕೂಡಲೇ ಅದು ಪತ್ರಿಕೆಗಳ ಮೂಲಕ ಪ್ರಚಾರವಾಗಿಬಿಡುತ್ತದೆ; ಹಾಗೂ ಎಲ್ಲರ ಬಾಯಲ್ಲೂ ಅದೇ ಸುದ್ದಿ ಹಬ್ಬುವುದಲ್ಲದೇ ಅದೊಂದು ಇತಿಹಾಸವೇ ಆಗಿಬಿಡುತ್ತದೆ. ಈ ಮಾತು ಮನೆತನಗಳಿಗೂ, ಸಮಾಜಗಳಿಗೂ ಅನ್ವಯಿಸುವಂತೆ ಜನಾಂಗಗಳಿಗೂ ಅನ್ವಯಿಸುವುದು. ನಿಸರ್ಗ ನಿಯಮವು ಕುಟುಂಬಗಳಿಗೊಂದು ತೆರ, ಜನಾಂಗಗಳಿಗೆ ಮತ್ತೊಂದು ತೆರ ಎಂಬಂತಿರುವುದಿಲ್ಲ. ಆದ್ದರಿಂದ, ಇತಿಹಾಸವೆಂಬುದು ಈ ನಿಸರ್ಗನಿಯಮದ ಅಥವಾ ಶಕ್ತಿಯ ನಿರೋಧದ ವೃತ್ತಾಂತಗಳ ಸಂಗ್ರಹವೆನಿಸುವುದು. ಆತ್ಮಶಕ್ತಿಯು ನೈಸರ್ಗಿಕವಾಗಿದ್ದು ಅದನ್ನು ಇತಿಹಾಸವು ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಲಿಲ್ಲ.

(ಹಿ.ಸ್ವ, ಅಧ್ಯಾಯ 17)

* * *

ಉದಾತ್ತ ಗುಣಗಳ ಬೆಳವಣಿಗೆಗೆ ನಿರ್ಭಯತೆಯು ಅತ್ಯವಶ್ಯವಾಗಿ ಬೇಕು. ನಿರ್ಭಯತೆ ಇಲ್ಲದೆ ಸತ್ಯವನ್ನು ಹುಡುಕುವುದಾಗಲೀ ಸರ್ವರನ್ನೂ ಪ್ರೀತಿಸುವುದಾಗಲೀ ಹೇಗೆ ಸಾಧ್ಯ? ಪ್ರಿತಮನು ಸಾರಿದಂತೆ "ಪರಮಾತ್ಮನ ಪಥವು ಧೈರ್ಯಶಾಲಿಗಳದೇ ಹೊರತು ಹೇಡಿಗಳದಲ್ಲ" ಪರಮಾತ್ಮ ಎಂದರೆ ಸತ್ಯ; ನಿರ್ಭಯತೆಯುಳ್ಳವರೇ ಧೈರ್ಯಶಾಲಿಗಳು.

(ಯರವಡಾ ಮಂದಿರ-ಪು. 40)

* * *

ಸತ್ಯ – ಮಿತಾಹಾರ

ದೈವಭಕ್ತನಾಗಿ ಬಾಳಬೇಕೆಂಬ ಹಾಗೂ ದೇವರನ್ನು ಪ್ರತ್ಯಕ್ಷ ಮಾಡಿಕೊಳ್ಳಬೇಕೆಂಬ ಸತ್ಯಶೋಧಕನು, ಮಾತು ಹಾಗೂ ಮನೆಗಳಲ್ಲಿಯಂತೆ, ಆಹಾರದಲ್ಲಿಯೂ ಸಂಯಮಿಯಾಗಿರಬೇಕು.

(ಆ.ಚ., ಪು. 334)

* * *

ನಮ್ಮ ಜೀವನದ ಪ್ರತಿ ಕ್ಷಣವೂ ಮಾನಸಿಕ ಅಥವಾ ಶಾರೀರಿಕ ಚಟುವಟಿಕೆಯಿಂದ ತುಂಬಿರಬೇಕು. ಆದರೆ ಅದು ಸಾತ್ವಿಕವಾಗಿದ್ದು ಸತ್ಯಕ್ಕೆ ಒಲೆದಿರಬೇಕು. ಯಾವನು ತನ್ನ ಬಾಳನ್ನು ಸೇವೆಗಾಗಿ ಮುಡಿಪಿಟ್ಟಿರುವನೋ ಅವನು ಒಂದು ನಿಮಿಷವನ್ನಾದರೂ ನಿರುದ್ಯೋಗಿಯಾಗಿ ಕಳೆಯನು. ಆದರೆ ಒಳ್ಳೆಯ ಕೆಲಸ ಯಾವುದು, ಕೆಟ್ಟದು ಯಾವುದು ಎಂಬುದನ್ನಾತನು ಅರಿತಿರಬೇಕು. ಸೇವೆಯಲ್ಲೇ ಆಸಕ್ತನಾಗಿರುವವನಿಗೆ ಈ ವಿವೇಕವು ತಾನಾಗಿಯೇ ಬರುವುದು.

(ಯರವಡಾ ಮಂದಿರ, ಪು. 39)

* * *

ಸತ್ಯಾಗ್ರಹಿಯಾದವನು, ಹೊರಗಿರಲಿ ಇಲ್ಲವೆ ಸೆರೆಮನೆಯಲ್ಲಿರಲಿ, ಸದಾ ವಿಜಯಿಯಾಗಿರುವನು. ಆತನು ಸತ್ಯವನ್ನು ತ್ಯಜಿಸಿ, ತನ್ನ ಅಂತರ್ವಾಣಿಗೆ ಕಿವುಡನಾದಾಗ ಸೋತಂತಾಗುವನು. ಆದ್ದರಿಂದ ಸತ್ಯಶೋಧಕನು ಸೋತರೆ, ಅದಕ್ಕೆ ಆತನೇ ಕಾರಣನಾಗುವನು. ಆನಂದವೆಂಬುದು ಹೋರಾಟದಲ್ಲಿ, ಪ್ರಯತ್ನದಲ್ಲಿ ಮತ್ತು ಸತ್ಯಕ್ಕಾಗಿ ಹಿಂಸೆಯನ್ನು ಸಹಿಸಿಕೊಳ್ಳುವುದರಲ್ಲಿದೆಯೇ ಹೊರತು ವಿಜಯದಲ್ಲಲ್ಲ; ಏಕೆಂದರೆ, ಆತನ ಪ್ರಯತ್ನದಲ್ಲಿ ವಿಜಯವು ಅಡಕಗೊಂಡೇ ಇರುತ್ತದೆ.

(ಹ, ಪು. 366)

ಅಹಿಂಸಾವ್ರತಿಯಾದ ಸತ್ಯೋಪಾಸಕನು ತನ್ನ ಆಹಾರವನ್ನು ತನ್ನ ದುಡಿತದಿಂದಲೇ ಪಡೆಯುವುದು ಅತ್ಯಂತ ಹಿತಕರವಾದದ್ದು. ಅದರಿಂದ ಆತನಿಗೆ ಬ್ರಹ್ಮಚರ್ಯ ಪಾಲನೆಯು ಸ್ವಾಭಾವಿಕವಾಗಿಯೇ ಸಾಧ್ಯವಾಗುವುದು. ಈ ದುಡಿಮೆಯು ಕೃಷಿಗಷ್ಟೇ ಸಂಬಂಧಿಸಿದ್ದಾಗಿರಬೇಕು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕೃಷಿಯಿಂದ ಜೀವಿಕೆ ಗಳಿಸುವುದು ಎಲ್ಲರಿಗೂ ಸಾಧ್ಯವಾಗದೇ ಇರುವುದರಿಂದ, ನೂಲುವುದು, ನೇಯುವುದು ಅಥವಾ ಬಡಿಗತನ, ಕಮ್ಮಾರಿಕೆ- ಇವುಗಳಲ್ಲಿ ಯಾವುದೊಂದು ಶಾರೀರಿಕ ಶ್ರಮದಿಂದಲಾದರೂ ಸತ್ಯೋಪಾಸಕನು ತನ್ನ ಆಹಾರವನ್ನು ತಾನೇ ಗಳಿಸಿಕೊಳ್ಳಬೇಕು. ಆತನು ತನ್ನ ಶೌಚಕೂಪಗಳನ್ನು ತಾನೇ ಸ್ವಚ್ಛಪಡಿಸಿಕೊಳ್ಳುವ ಭಂಗಿಯಾಗಬೇಕು.

(ಯರವಡಾ ಮಂದಿರ–ಪು. 50)

* * *

ಸತ್ಯ - ಕಲೆ

ಎಲ್ಲ ವಸ್ತುಗಳಿಗೂ ಆಂತರ್ಯ ಮತ್ತು ಬಾಹ್ಯ ಎಂಬ ಎರಡು ಮುಖಗಳಿರುತ್ತವೆ. ನನ್ನ ದೃಷ್ಟಿಯಲ್ಲಿ ಅದು ಮಹತ್ವದ್ದಾಗಿದೆ. ಆಂತರ್ಯಕ್ಕೆ ಪೂರಕವಾಗದ ಬಾಹ್ಯವು ನಿರರ್ಥಕವೇ ಸರಿ. ನಿಜವಾದ ಎಲ್ಲ ಕಲೆಯೂ ಆಂತರ್ಯದ ವ್ಯಕ್ತರೂಪವಾಗಿದೆ. ಮನುಷ್ಯನ ಅಂತಶ್ಶಕ್ತಿಯನ್ನು ತೋರ್ಪಡಿಸುವ ವ್ಯಕ್ತರೂಪಗಳನ್ನು ಹೊಂದಿದಾಗಲೇ ಅವುಗಳಿಗೆ ಕಲೆಯೆಂಬ ಬೆಲೆ ಬರುವುದು. ಆ ಬಗೆಯ ಕಲೆಯೇ ನನಗೆ ಹೆಚ್ಚು ಪ್ರಭಾವಶಾಲಿಯಾಗಿ ತೋರುವುದು. ಆದರೆ ಆತ್ಮಶಕ್ತಿಯ ಸ್ಪಂದನವಿಲ್ಲದ ಹಾಗೂ ಊರ್ಧ್ವಗತಿಯನ್ನು ಹೊಂದಿರದ ಎಷ್ಟೋ ಜನರ ಕೃತಿಗಳನ್ನು ಕಲೆಗಳೆಂದೂ, ಅವರನ್ನು ಕಲಾವಿದರೆಂದೂ ಪ್ರಶಂಸಿಸುವುದು ಕಂಡುಬರುತ್ತಿದೆ.

ಸತ್ಯವಾದ ಕಲೆ ಎಲ್ಲವೂ ಅಂತರಾತ್ಮದ ಸಾಕ್ಷಾತ್ಕಾರಕ್ಕೆ ನೆರವಾಗಲೇಬೇಕು. ನನ್ನ ಮಟ್ಟಿಗೆ ಹೇಳುವುದಾದರೆ ಆತ್ಮವು ಯಾವ ಬಾಹ್ಯ ಕೃತಿಯ ನೆರವಿಲ್ಲದೆ ತನ್ನನ್ನು ತಾನು ಕಂಡುಕೊಳ್ಳಬಲ್ಲದು. ನನ್ನ ಕೋಣೆಯ ಗೋಡೆಗಳು ಅಲಂಕಾರರಹಿತವಾಗಿರಬಹುದು; ಅದಕ್ಕೆ ಮಾಡು ಇಲ್ಲದೆ ಇದ್ದು, ನಕ್ಷತ್ರಭರಿತವಾದ ಅನಂತಾಕಾಶದ ದಿವ್ಯ ಸೌಂದರ್ಯವನ್ನು ಸದಾ ನೋಡಲು ಅನುಕೂಲವಾಗಬಹುದು. ಮನುಷ್ಯಕೃತ್ಯವಾದ ಯಾವ ಉಜ್ವಲ ಕಲಾಕೃತಿಯು ಈ ನಕ್ಷತ್ರಖಚಿತ ಆಕಾಶದ ಚಿತ್ರವನ್ನು ರಚಿಸಿಕೊಡಬಲ್ಲುದು? ಹೀಗೆ ಹೇಳುವುದರಿಂದ ಮನುಷ್ಯಕೃತವಾದ ಕಲಾಕೃತಿಗಳನ್ನು ನಾನು ನಿರಾಕರಿಸುತ್ತೇನೆಂದಲ್ಲ; ಆದರೆ, ನಿಸರ್ಗದಲ್ಲಿರುವ ಅಮರವಾದ ಕಲಾಸಂಕೇತವನ್ನು ಮನುಷ್ಯ ಕೃತಿಗಳು ಎಂದಿಗೂ ಹೋಲಲಾರವೆಂಬುದೇ ನನ್ನ ಅಭಿಪ್ರಾಯ. ಮನುಷ್ಯಕೃತ ಕಲಾಕೃತಿಗಳು ಆತ್ಮೋದ್ಧಾರಕ್ಕೆ ಸಹಾಯಕವಾದರೇನೇ ಅವುಗಳು ಅಮೂಲ್ಯವಾಗುವುವು.

ಸದ್ಭಾವನೆಗಳು, ಸತ್ಯತೇಜಸ್ಸಿನ ಮುಖಗಳು, ಸತ್ಯಭರಿತ ಚಿತ್ರಗಳು, ಸಂಗೀತಗಳು – ಇವಷ್ಟೇ ಅಲ್ಲದೇ ಎಲ್ಲ ಸತ್ಯಗಳೂ ಅತ್ಯಂತ

ಸುಂದರವಾಗಿರುತ್ತದೆ. ಜನರು, ಸಾಮಾನ್ಯವಾಗಿ, ಸತ್ಯದಲ್ಲಿ ಸೌಂದರ್ಯವನ್ನು ನೋಡಲಾಗದವರಾಗಿದ್ದಾರೆ. ತೀರ ಸಾಮಾನ್ಯರಂತೂ ಸತ್ಯದಿಂದ ದೂರ ಓಡುತ್ತ, ಅದರೊಳಗಿನ ಸೌಂದರ್ಯಕ್ಕೆ ಕುರುಡರಾಗಿಬಿಡುತ್ತಾರೆ. ಯಾವಾಗ ಜನರು ಸತ್ಯದಲ್ಲಿ ಸೌಂದರ್ಯವನ್ನು ನೋಡಲು ಪ್ರಾರಂಭಿಸುವರೋ ಆಗ ನಿಜವಾದ ಕಲೆಯು ಹುಟ್ಟುತ್ತದೆ. ಸತ್ಯದೃಷ್ಟಿಯುಂಟಾದಾಗಲೇ ನಿಜವಾಗಿಯೂ ಸುಂದರವಾದ ಕಲಾಕೃತಿಗಳ ರಚನೆಯಾಗುವುದು. ಅಂತಹ ಸತ್ಯನಿಮಿಷಗಳು ಬಾಳಿನಲ್ಲಿ ಕಡಿಮೆಯಾದಂತೆ, ಉತ್ಕೃಷ್ಟ ಕಲಾಕೃತಿಗಳ ರಚನೆಯೂ ಕಡಿಮೆಯಾಗುತ್ತದೆ.

(ಯ.ಇ., ಪು. 377)

* * *

ನಿಜವಾದ ಕಲೆಯು ಬಾಹ್ಯವನ್ನಷ್ಟೇ ಅಲ್ಲದೇ ಆಂತರ್ಯವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವುದು. ನಾಶಮಾಡುವ ಕಲೆ ಇದ್ದಂತೆ ಜೀವದಾನಮಾಡುವ ಕಲೆಯೂ ಇದೆ. ನಿಜವಾದ ಕಲೆಯು ಕಲಾಕಾರನಲ್ಲಿರುವ ಸುಖ, ಸಮಾಧಾನ, ಮತ್ತು ಪಾವಿತ್ರ್ಯಗಳಿಗೆ ಸಾಕ್ಷಿಯಾಗಿರುತ್ತದೆ.

(ಯ.ಇ., ಪು. 253)

* * *

ಕಲೆಗೂ ಕಲಾಕಾರನ ಜೀವನ ಪರಿಶುದ್ಧತೆಗೂ ಪರಸ್ಪರ ಸಂಬಂಧವಿಲ್ಲವೆಂದು ಭಾವಿಸುವುದ ಬಳಕೆಗೆ ಬಂದಿದೆ. ನನ್ನ ಸಕಲ ಅನುಭವಗಳ ಮೇಲಿಂದ ಹೇಳುವುದಾದರೆ, ಇದಕ್ಕಿಂತ ಹೆಚ್ಚಿನ ಅಸತ್ಯ ಬೇರೊಂದಿಲ್ಲ. ಇಹಜೀವನದ ಕೊನೆಯನ್ನು ಸಮೀಪಿಸುತ್ತಿರುವ ನಾನು ಹೀಗೆ ಹೇಳುತ್ತೇನೆ- ಪರಿಶುದ್ಧ ಜೀವನವೇ ಅತ್ಯಂತ ಶ್ರೇಷ್ಠವಾದ ಹಾಗೂ ಅತ್ಯಂತ ಸತ್ಯವಾದ ಕಲೆ. ಧ್ವನಿಸಾಧನೆಯನ್ನು ಪ್ರಯತ್ನಪೂರ್ವಕವಾಗಿ ಮಾಡಿ ಕಂಠ ಮಾಧುರ್ಯವನ್ನು ಅನೇಕರು ಸಾಧಿಸಿಕೊಳ್ಳುತ್ತಾರೆ; ಆದರೆ, ಪರಿಶುದ್ಧ ಜೀವನವನ್ನು ನಡೆಸುವುದರಿಂದಲೇ ಕಂಠಮಾಧುರ್ಯವನ್ನು ಪಡೆಯುವವರು ತೀರ ವಿರಳವಾಗಿದ್ದಾರೆ.

(ಹ., ಪು. 10)

ಸತ್ಯ ಮತ್ತು ಅಹಿಂಸೆಯಷ್ಟು ಪುರಾತನವಾದ ಒಳ್ಳೆಯವೆರಡು ವಸ್ತುಗಳು ಬೇರಾವುವೂ ಇಲ್ಲವೆಂದು ನಾನು ಪರಿಶೋಧನೆ ಮಾಡಿ ನಿರ್ಧರಿಸಿಕೊಂಡಿದ್ದೇನೆ. ಇವುಗಳಿಗೆ ಹೊಂದಿಕೆಯಾಗದ ಯಾವ ಪುರಾತನ ಪದ್ಧತಿ ಇದ್ದರೂ ಅದನ್ನು ಪುನಃ ಆಚರಣೆಗೆ ತರಬಾರದೆಂದೂ ನಾನು ಕಂಡುಕೊಂಡಿದ್ದೇನೆ. ಆಗಿನ ಕಾಲದಲ್ಲಿ ಕೆಲವು ರೂಢಿಗಳು ಅವಶ್ಯವಾಗಿದ್ದು, ಅವುಗಳನ್ನು ಜನರು ಪಾಲಿಸುತ್ತಿದ್ದರೂ, ಅವು ಸತ್ಯ ಮತ್ತು ಅಹಿಂಸೆಗಳಿಗೆ ಅವಿರೋಧವಾಗಿದ್ದಲ್ಲಿ, ಈಗಿನ ಕಾಲಕ್ಕೆ ಹಿಡಿಸದಿದ್ದರೂ ಅವನ್ನು ಅವಶ್ಯ ಪಾಲಿಸಬೇಕೆಂದು ನಾನು ಹೇಳುವೆನು.

(ಸಿಲೋನ್, ಪು. 131)

ಸತ್ಯ – ಸ್ವದೇಶಿ

'ಸ್ವದೇಶಿ' ಎಂಬ ಪದಕ್ಕೆ 'ಸತ್ಯವಾದ' ಎಂಬ ವಿಶೇಷಣವನ್ನು ನಾನು ಕೂಡಿಸುವಾಗ, "ಅಸತ್ಯವಾದ ಸ್ವದೇಶೀ" ಎಂಬುದುಂಟೇ ಎಂದು ಟೀಕಾಕಾರರು ಕೇಳಬಹುದು. ಅದಕ್ಕೆ "ಹೌದು" ಎಂದು, ದುರ್ದೈವದಿಂದಾಗಿ, ಉತ್ತರ ಕೊಡಬೇಕಾಗಿದೆ. ಖಾದಿಯುಗ ಆರಂಭವಾದಂದಿನಿಂದ, ಸ್ವದೇಶಿಯ ಬಗ್ಗೆ ನಾನೊಬ್ಬ ಆಧಾರ ಪುರುಷನೆಂದು ಗಣಿಸಲ್ಪಟ್ಟಿರುವುದರಿಂದ, ಅನೇಕರು ಅನೇಕ ಸಮಸ್ಯೆಗಳನ್ನು ನನ್ನ ಮುಂದೆ ಒಡ್ಡುತ್ತಿದ್ದಾರೆ. ಹಾಗಾಗಿ, ನಾನು ಸ್ವದೇಶಿಯನ್ನು 'ಸತ್ಯ' ಮತ್ತು 'ಸುಳ್ಳು' ಎಂದು ಎರಡು ವಿಧವಾಗಿ ಗುರುತಿಸಿ ತೋರಿಸಬೇಕಾಗಿದೆ. ವಿದೇಶಿ ಬಂಡವಾಳ ಅಥವಾ ವಿದೇಶಿ ತಂತ್ರಜ್ಞತೆಯ ಉಪಯೋಗಮಾಡಿಕೊಳ್ಳುವ ಸ್ವದೇಶೀ ಉದ್ದಿಮೆಯು ಸ್ವದೇಶಿ ಎನಿಸಬಹುದೆ? ಇತರ ಸಮಸ್ಯೆಗಳೂ ಇವೆ. ಕೆಲದಿನಗಳ ಹಿಂದೆ ಒಬ್ಬ ಮಂತ್ರಿಗೆ ನಾನು ಕೊಟ್ಟಿರುವ ಸ್ವದೇಶೀ ವ್ಯಾಖ್ಯೆಯನ್ನು ಇಲ್ಲಿ ಮತ್ತೆ ಎತ್ತಿ ಹೇಳುವುದೊಳ್ಳೆಯದು– "ಲಕ್ಷಾಂತರ ಜನತೆಯ ಅವಶ್ಯಕತೆಗಳನ್ನು ಪೂರೈಸಿ ಕೊಡುವ ಯಾವ ವಸ್ತುವೇ ಇರಲಿ, ಅದರ ಬಂಡವಾಳ ಮತ್ತು ತಂತ್ರಜ್ಞತೆಯು ವಿದೇಶಿಯವಾಗಿದ್ದರೂ ಆ ಉದ್ದಿಮೆಯು ಭಾರತೀಯರ ಅಧೀನವಾಗಿದ್ದರೆ, ಅದು ಸ್ವದೇಶಿಯಾಗುವುದು" ಈ ದೃಷ್ಟಿಯಿಂದ, "ಅಖಿಲ ಭಾರತ ಚರಖಾ ಸಂಘ"ದ ಅಧಿಕೃತ ಖಾದಿಯು – ಅದರ ಉತ್ಪಾದನೆಯಲ್ಲಿ ವಿದೇಶೀ ಬಂಡವಾಳ ಮತ್ತು ವಿದೇಶೀ ತಂತ್ರಜ್ಞರ ನೆರವು ಇದ್ದರೂ ಶುದ್ಧ 'ಸ್ವದೇಶಿ' ಎನಿಸುವುದು. ಅದೇ ಮೇರೆಗೆ, ಬಾಟಾ ಕಂಪನಿಯ ಜೋಡುಗಳು–ಅದರ ಉತ್ಪಾದನೆಯಲ್ಲಿ ಹಿಂದಿ ಕೆಲಸಗಾರರೂ ಬಂಡವಾಳವೂ ತೊಡಗಿದ್ದರೂ– ವಿದೇಶಿ ಎನಿಸುವುದು. ಯಾಕೆಂದರೆ, ಅದು ವಿದೇಶಿಯರ ಅಧೀನವಾಗಿದೆ. ಅಷ್ಟೇ ಅಲ್ಲದೆ, ಅದರ ಜೋಡುಗಳು ಎಷ್ಟೇ ಅಗ್ಗವಾಗಿದ್ದರೂ ಹಳ್ಳಿಯ ಚಮ್ಮಾರರಿಗೆ ಹಾಗೂ ಹಳ್ಳಿಯ ಚಮ್ಮಾರಿಕೆಗೆ

ಹಾನಿಕರವಾಗಿರುವುದರಿಂದ ಅವುಗಳು ಇಮ್ಮಡಿ ವಿದೇಶೀ ಎನಿಸುವುವು. ಈ ಜೋಡುಗಳ ಸ್ಪರ್ಧೆಯ ದುಷ್ಪರಿಣಾಮವನ್ನು ಈಗಾಗಲೇ ಬಿಹಾರ ಚಮ್ಮಾರರು ಅನುಭವಿಸುತ್ತಿದ್ದಾರೆ. ಬಾಟಾ ಜೋಡು ಯುರೋಪನ್ನು ಉಳಿಸಿದರೆ, ನಮ್ಮ ಹಳ್ಳಿಗಳ ಚಮ್ಮಾರರಿಗೂ ಚರ್ಮ ಹದಗಾರರಿಗೂ ಮೃತ್ಯುವಾಗಿಬಿಟ್ಟದೆ. ಕೆಲಮಟ್ಟಿಗೆ ಊಹನಾತ್ಮಕವಾಗಿದ್ದರೂ ಈ ಎರಡೂ ದೃಷ್ಟಾಂತಗಳು ಪರಿಣಾಮಕಾರಿಯಾಗಿವೆ. ಯಾಕೆಂದರೆ, ಚರಖಾ ಸಂಘದ ಎಲ್ಲ ಬಂಡವಾಳವೂ ತಂತ್ರಜ್ಞತೆಯೂ ಸಂಪೂರ್ಣ ಸ್ವದೇಶೀಯಾಗಿವೆ. ಸದ್ಯದ ಚರಖಕ್ಕಿಂತ ಉತ್ತಮವಾದುದನ್ನು ಕಂಡುಹಿಡಿಯಲಿಕ್ಕಾಗಿ ವಿದೇಶೀ ತಂತ್ರಜ್ಞರ ನೆರವನ್ನು ಪಡೆಯಲು ನಾನು ಸಂತೋಷಿಸುವೆನಾದರೂ, ಸ್ವದೇಶೀ ತಂತ್ರಜ್ಞತೆಯು ಕೀಳುತರದ್ದಾಗಿಲ್ಲವೆಂದು ನನಗೆ ಖಚಿತವಾಗಿದೆ. ವಿಷಯಾಂತರವಾದರೂ ಚಿಂತೆ ಇಲ್ಲ, ಮಂತ್ರಿಗಳೂ, ಸಾರ್ವಜನಿಕರೂ 'ಸತ್ಯ'ವಾದ ಸ್ವದೇಶಿ ಯಾವುದು. "ಸುಳ್ಳು" ಸ್ವದೇಶಿ ಯಾವುದು, ಎಂಬುದನ್ನು ತಿಳಿದುಕೊಳ್ಳಲೆಂದು ನಾನು ಆಶಿಸುತ್ತೇನೆ.

(ಹ., ಮ. 25)

* * *

ಸತ್ಯ ಮತ್ತು ಸಂಪತ್ತು

ಮನುಷ್ಯರ ಕೃತಿಗಳನ್ನು ವಿಮರ್ಶಿಸುವಾಗ, ಅವುಗಳಿಂದ ಲೋಕಕ್ಕೆ ಹಿತವಾಗುವುದೋ ಇಲ್ಲವೋ ಎಂಬುದೇ ಒರೆಗಲ್ಲಾಗಿರಬೇಕು. ವ್ಯಾಪಾರಿಯು ಗಿರಾಕಿಗಳಿಗೆ ಅಹಿತಮಾಡಿ ಲಾಭಗಳಿಸಬಾರದು. ವಕೀಲರೂ, ಡಾಕ್ಟರರೂ ತಮ್ಮ ಪಕ್ಷಕಾರರ ಹಿತವನ್ನು ಲಕ್ಷಿಸಬೇಕೇ ಹೊರತು ತಮ್ಮ ಆದಾಯದ ಹೆಚ್ಚಳವನ್ನಲ್ಲ. ತಾಯಿಯ ಅತಿ ಲಾಲನೆಯಿಂದ ಅಥವಾ ಮೋಹಕ ಪ್ರೇಮದಿಂದ ಮಗುವು ಕೆಟ್ಟುಹೋಗುವಂತೆ ಮಾಡಬಾರದು. ಅನ್ಯಾಯದ ಮಾರ್ಗಗಳಿಂದ ಧನಿಕವಾಗುವ ಬುದ್ಧಿವಂತ ವ್ಯಾಪಾರಿ, ವಕೀಲ ಅಥವಾ ಡಾಕ್ಟರನಿಗಿಂತ ನಿರಕ್ಷರಿಯಾದ ಬಡ ಕೂಲಿಕಾರನು ಶ್ರೇಷ್ಠ ಮನುಷ್ಯನು. ಅತ್ಯಂತ ಕನಿಷ್ಠತರಹದವರೂ ಕೂಡಾ ಈ ತತ್ತ್ವದಂತೆ ತಮ್ಮ ಬದುಕನ್ನು ಸಾಗಿಸಲು ಬರುವುದೆಂಬುದನ್ನು ಎಂದಿಗೂ ಮರೆಯಬಾರದು. ನಮ್ಮಲ್ಲಿ ತೀರ ದೀನನಾದವನು ಸಹ ಸಂಪತ್ತು ಮತ್ತು ಸ್ಥಾನಬಲಗಳನ್ನು ಮೀರಿ ಬೆಳಗಬಲ್ಲದು. ಯಾಕೆಂದರೆ ವ್ಯಕ್ತಿಯ ಶ್ರೇಷ್ಠತೆಯು ಆತನ ಸಂಪತ್ತು ಮತ್ತು ಸಾಮಾಜಿಕ ಸ್ಥಾನಗಳನ್ನವಲಂಬಿಸಿರದೆ, ಆತನ ನಡವಳಿಕೆ ಮತ್ತು ಜೀವನದ ರೀತಿಯನ್ನು ಅವಲಂಬಿಸಿರುತ್ತದೆ. ಮನುಷ್ಯನ ಗುಣಪರೀಕ್ಷೆ ಮಾಡುವಾಗ ಆತನ ಅಂತರಂಗದ ಯೋಚನೆಗಳನ್ನು ತಿಳಿಯಲೆತ್ನಿಸಬೇಕು. ಒಬ್ಬನು ಭಿಕ್ಷುಕನನ್ನು ದೂರಮಾಡುವ ಸಲುವಾಗಿ ಒಂದು ರೂಪಾಯಿ ದಾನಮಾಡಬಹುದು; ಮತ್ತೊಬ್ಬನು ಆತನ ದುಃಸ್ಥಿತಿಯನ್ನು ಕಂಡು ಮರುಗಿ, ಪ್ರೇಮದಿಂದ ನಾಲ್ಕಾಣೆಯನ್ನು ನೀಡಬಹುದು. ಇವರಿಬ್ಬರಲ್ಲಿ ಎರಡನೆಯವನೇ ಮೊದಲಿನವನಿಗಿಂತ ಬಹಳ ಕಡಿಮೆ ಹಣ ಕೊಟ್ಟದ್ದರೂ–ಹೆಚ್ಚಿನವನು.

ಆದ್ದರಿಂದ ಯಾರ ಮನಸ್ಸು ದ್ವೇಷ ಅಥವಾ ಸ್ವಾರ್ಥದಿಂದ ಕಳಂಕಿತವಾಗಿರುವುದಿಲ್ಲವೋ, ಯಾರು ಪರಿಶುದ್ಧರಾಗಿ ಮತ್ತು ಫಲಾಪೇಕ್ಷೆ

ಇಲ್ಲದೆ ಸೇವೆ ಮಾಡುವರೋ, ಅವರೇ ನಿಜವಾದ ಧರ್ಮಿಷ್ಠರು, ಸಿರಿವಂತರು; ಅವರೊಬ್ಬರನ್ನೇ ನಿಜವಾದ ಶ್ರೀಮಂತರೆಂದೂ ಸುಖಿಗಳೆಂದೂ ಕರೆಯಬಹುದು. ಅಂತಹ ಜನರೇ ಮಾನವಲೋಕಕ್ಕೆ ಒಳ್ಳೆಯದನ್ನು ಮಾಡುವವರು; ಯಾಕೆಂದರೆ ಸತ್ಯವೇ ಎಲ್ಲ ದೊಡ್ಡಸ್ತಿಕೆಗೂ ಒಳ್ಳೆಯತನಕ್ಕೂ ತಳಪಾಯವಾಗಿದೆ. ಮಾನವ ಕುಟುಂಬದ ಸೇವಕನಿಗೆ ಯಾವ ಸೇವೆಯು ಅತ್ಯಂತ ಹೆಚ್ಚಿನದೆಂಬ ಪ್ರಶ್ನೆ ಉಂಟಾಗುವುದಿಲ್ಲ; ನೀತಿ ಧರ್ಮದ ಘನತೆಯನ್ನು ಅರಿತುಕೊಂಡಾಗ, ನಮ್ಮ ಜೀವನದ ಸುಖಾಸುಖಕ್ಕೆ, ಆರೋಗ್ಯವಾಗಲೀ, ಗೆಲುವಾಗಲೀ, ಕೀರ್ತಿಯಾಗಲೀ ಕಾರಣವಲ್ಲವೆಂಬುದು ಸ್ಪಷ್ಟವಾಗುವುದು. ಎಮರ್ಸನ್ನರು ಮಾರ್ಮಿಕವಾಗಿ ಹೇಳಿರುವಂತೆ, ಸಜ್ಜನರಿಗೆ ಅವರ ದುಃಖ, ಸಂಕಟಗಳಿಗೂ ಸುಖವನ್ನುಂಟುಮಾಡಿಕೊಡುತ್ತವೆ. ಅದೇ ವೇಳೆಗೆ, ದುರ್ಜನರಿಗೆ ಅವರ ಸಂಪತ್ತೂ, ಕೀರ್ತಿಯೂ ದುಃಖವನ್ನೇ ಉಂಟುಮಾಡಿಕೊಡುತ್ತವೆ.

ಆದ್ದರಿಂದ ಮೊತ್ತಮೊದಲು ದೇವರ ರಾಜ್ಯವನ್ನೂ ಆತನ ಧರ್ಮನೀತಿಯನ್ನೂ ಗಳಿಸಿಕೊಳ್ಳಿರಿ. ಉಳಿದುವೆಲ್ಲ ತಾವಾಗಿಯೇ ದೊರಕುತ್ತವೆ.

(ನೀತಿಧರ್ಮ, – ಪು. 59)

* * *

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896 ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906 ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915

ಸಾಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಯಾತ್ರೆ	1933
ಹರಿಜನ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10-00
2.	ಕರ್ನಾಟಕದಲ್ಲಿ ಗಾಂಧೀ	5-00
3.	ರಾಮನಾಮ	6-00
4.	ಗಾಂಧೀ ಬಳಗದ ವಿದೇಶಿಯರು	40-00
5.	ಆರೋಗ್ಯ	8-00
6.	ಪ್ರಾರ್ಥನೆ	8-00
7.	ಸತ್ಯಾಗ್ರಹ	8-00
8.	ಮಹಿಳೆಯರಿಗಾಗಿ	8-00
9.	ಪಂಚಾಯತ್ ರಾಜ್	12-00
10.	ಆದರ್ಶಗಳು	12-00
11.	ನಮ್ಮ ಗಾಂಧೀ ತಾತ	25-00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2-00
13.	ನಮ್ಮ ಗಾಂಧೀ ತಾತ	15-00
14.	ಹೋರಾಟ ಶ್ರೀ	40-00
15.	ಮಹಾತ್ಮ ಗಾಂಧೀಜಿಯವರ ಮೈಲಿಗಲ್ಲು	3-00
16.	ಗಾಂಧೀಜಿ ಜೀವನ ಚರಿತ್ರೆ	25-00
17.	ಕುವೆಂಪು ಕಂಡ ಗಾಂಧೀ	25-00
18.	ಉಪ್ಪಿನ ಸತ್ಯಾಗ್ರಹ	5-00
19.	ಹಿಂದ್ ಸ್ವರಾಜ್	50-00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25-00
21.	ನನ್ನ ಕನಸಿನ ಭಾರತ	30-00
22.	ಹಿಂದೂ ಧರ್ಮ	25-00
23.	ಮಹಿಳೆಯರು	30-00
24.	ಸ್ವಾತಂತ್ರ್ಯ	25-00
25.	ಅಸ್ಪೃಶ್ಯತೆ	30-00
26.	ಒಳ್ಳೆಯ ಜೀವನ	25-00
27.	ಪ್ರಾರ್ಥನೆ	25-00
28.	ಗಾಂಧೀ ಮತ್ತು ಕರ್ನಾಟಕ	200-00
29.	ಸತ್ಯ	30-00
30.	ವಿದ್ಯಾರ್ಥಿಗಳಿಗಾಗಿ	30-00

31.	ಸರ್ವೋದಯ	30–00
32.	ಖಾದಿ ಗ್ರಾಮೋದ್ಯೋಗ	30–00
33.	ನನ್ನ ಬಾಲ್ಯದ ನೆನಪುಗಳು	30–00
34.	ಗ್ರಾಮರಾಜ್ಯ ಆಡಳಿತ	5–00
35.	ನನ್ನ ಕನಸಿನ ಸ್ವರಾಜ್ಯ	5–00
36.	ಗಾಂಧೀ ಮತ್ತು ಹಾಸ್ಯ	20–00
37.	ನನ್ನ ಆದರ್ಶಗ್ರಾಮ	5–00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48–00
39.	ಸತ್ಯಾಗ್ರಹಿ	40–00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
43.	ಸತ್ಯಾಗ್ರಹ	5–00
44.	ಹಿಂದ್ ಸ್ವರಾಜ್	5–00
45.	ಆರೋಗ್ಯ	5–00
46.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
47.	ಬಹುರೂಪಿ ಗಾಂಧಿ	10–00
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
49.	ಕೃತಯುಗಿ ವಿನೋಬಾ ಭಾವೆ	15–00
50.	ಮೋಹನ ತರಂಗ	40–00
51.	ನಮ್ಮ ಗಾಂಧಿ ತಾತ	5–00
52.	ಗೀತಾ ಪ್ರವಚನ	80–00
53.	ಜೆ.ಪಿ. ಜೀವನ ಹಾದಿ	45–00
54.	ಗಣ್ಯರು ಕಂಡಂತೆ ಗಾಂಧಿ	20.0
55.	ಗೀತಾಮಾತೆ	80.00
56.	Temple & Mosque	10–00
57.	Rastrapita Mahatma Gandhi	25–00
58.	Swarajya of Dreams	5–00
59.	Gandhi My Grand Father	5–00
60.	Grand Pa Gandhi	5–00
61.	Relevance of Gandhi	20–00
62.	Vinoba age of the sage	20.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ, ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-05-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927
● ನಿಪ್ಪಾಣಿ	ದಿ. 28-03-1927 ರಿಂದ ದಿ. 30-12-1924 ರವರೆಗೆ

● ಬೆಳಗಾವಿ	ದಿ. 19-04-1027 ರಿಂದ ದಿ. 20-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ	ದಿ. 19-07-1927
● ಮೈಸೂರು	ದಿ. 22-07-1927
● ಬೆಂಗಳೂರು	ದಿ. 12-07-1927 ರಿಂದ ದಿ. 30-07-1927 ರವರೆಗೆ
● ಕ್ಲೊಸ್‌ಪೇಟೆ (ರಾಮನಗರ)	ದಿ. 31-07-1927
● ಕಾನಕನಹಳ್ಳಿ (ಕನಕಪುರ)	
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927

● ಶಿವಮೊಗ್ಗ	ದಿ. 15-08-1927
● ಆಯನೂರು, ಕುಂಸಿ, ಸಾಗರ ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಶಿವಮೊಗ್ಗ	ದಿ. 15-08-1927
● ಭದ್ರಾವತಿ, ತರೀಕೆರೆ	ದಿ. 18-08-1927
● ಬೀರೂರು, ಕಡೂರು	
● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು	ದಿ. 20-08-1927
● ಅರಸೀಕರೆ	
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934

• ಬೆಂಗಳೂರು	ದಿ. 07–01–1934 ರಿಂದ ದಿ. 09–01–1934 ರವರೆಗೆ
• ಪೊನ್ನಂಪೇಟೆ, ಹುದಿಕೇರಿ	ದಿ. 22–02–1934
• ವಿರಾಜಪೇಟೆ, ಬೆಳ್ಳೂರು	ದಿ. 23–02–1934
• ಸೋಮವಾರ ಪೇಟೆ	
• ಗುಂಡುಕಟ್ಟೆ	
• ಮಡಿಕೇರಿ, ಸಂಪಾಜೆ, ಸುಳ್ಯ	ದಿ. 24–02–1934
• ಪುತ್ತೂರು, ಉಪ್ಪಿನಂಗಡಿ	
• ವಿಠಲಗಬ್ಬ, ಕಲ್ಲಡ್ಕ, ಪಾಣೆ	
• ಮಂಗಳೂರು, ಬಂಟ್ವಾಳ	
• ಮಂಗಳೂರು	
• ಮಂಗಳೂರು, ಗುರುಪುರ, ಬಜ್ಪೆ ಯಳ್ಳೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಾಟಪಾಡಿ ಗುರುಪುರ, ಉದಯಪುರ ಉಡುಪಿ, ಬ್ರಹ್ಮಾವರ, ಸಿದ್ದಾಪುರ	ದಿ. 25–02–1934
• ಕುಂದಾಪುರ	ದಿ. 26–02–1934
• ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ	ದಿ. 27–02–1934
• ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28–02–1934
• ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು	ದಿ. 01–03–1934
• ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು	ದಿ. 02–03–1934

- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾವಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ

- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ದಿ. 04-03-1934
  ಹಿರೇಉಳ್ಳಗೇರಿ, ಬೈಲಹೊಂಗಲ
  ಉಪ್ಪಿನ, ಬೆಟಗೇರಿ, ಸೌಂದತ್ತಿ
  ಸಂಪಗಾಂವ್, ಹೊಸೂರು, ಬೆಳಗಾವಿ
- ಬೆಳಗಾವಿ ದಿ. 05-03-1934
- ಬೆಳಗಾವಿ ದಿ. 06-03-1934
- ಬೆಳಗಾವಿ, ಯಮಕನಮರಡಿ ದಿ. 07-03-1934
  ಹುಕ್ಕೇರಿ, ಗೋಕಾಕ, ಸಂಕೇಶ್ವರ
  ನವಲೀಹಾಳ, ಚಿಕ್ಕೋಡಿ, ಅಂಕಲಿ
  ಶೆಡಬಾಳ, ಬನಹಟ್ಟಿ, ಅಥಣಿ
  ಬಿಜಾಪುರ, ತಿಕೋಟ, ತೊರವಿ
  ಇಳಕಲ್
- ನಂದಿ ಬೆಟ್ಟ 10-05-1936 ರಿಂದ
  30-05-1936 ರವರೆಗೆ
- ಚಿಕ್ಕಬಳ್ಳಾಪುರ, ಚಿಂತಾಮಣಿ 31-05-1936
  ಕೋಲಾರ, ಬಂಗಾರ ಪೇಟೆ, ಕೆ.ಜಿ.ಎಫ್
- ಬೆಂಗಳೂರು 01-06-1936 ರಿಂದ
  12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ 16-04-1936 ರಿಂದ
  21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗ	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿ	**Students**

'ಸತ್ಯ' ಎಂಬ ಈ ಎರಡಕ್ಷರದ ಪದ ಉಚ್ಚರಿಸಲು ಬಲು ಸುಲಭವಾದರೂ, ಅದನ್ನು ಪಾಲಿಸುವುದು, ಮಹಾನ್ ವ್ಯಕ್ತಿಗಳಿಗೂ ಕಡುಕಷ್ಟವಾದುದಾಗಿದೆ. ಸತ್ಯದೊಂದಿಗಿನ ಮುಖಾಮುಖಿಯನ್ನು ನಮ್ಮ ಪುರಾಣಗಳಲ್ಲಿ ರಾಮಾಯಣ - ಮಹಾಭಾರತದಲ್ಲಿ ಅನೇಕ ದೃಷ್ಟಾಂತಗಳ ಮುಖಾಂತರ ನಿರೂಪಿಸಿದ್ದಾರೆ. ಸತ್ಯ ಹರಿಶ್ಚಂದ್ರನ ಕಥೆ, ಸತ್ಯಸಂಧ ರಾಮನ ಕಥನ, ಸತ್ಯ ಪರಿಪಾಲಕ ಧರ್ಮರಾಯ, ಕರ್ಣ, ಕೃಷ್ಣನ ವೃತ್ತಾಂತಗಳು ನಮ್ಮನ್ನು ಸದಾ ಎಚ್ಚರಿಸುತ್ತಿರುತ್ತವೆ. ಎಲ್ಲಾ ಮತಧರ್ಮ, ಪಂಥಗಳು ಸತ್ಯದ ಬುನಾದಿಯಿಂದಲೇ ಹುಟ್ಟಿದವುಗಳಾಗಿವೆ. ಬುದ್ಧ ಗುರು - "ಸತ್ಯವೇ ನಮ್ಮ ದಾರಿದೀಪ ಎಂದರು, ಸ್ವಾಮಿ ವಿವೇಕಾನಂದರು- "ಜೀವನವೆಂಬುದು ಕಠಿಣ ಸತ್ಯ, ಸತ್ಯಕ್ಕಾಗಿ ಸರ್ವವನ್ನು ಸಮರ್ಪಿಸಬಹುದು, ಆದರೆ ಸತ್ಯವನ್ನು ಮತ್ತ್ಯಾವುದಕ್ಕೂ ತೆರುವುದಕ್ಕೆ ಆಗುವುದಿಲ್ಲ" ಎಂದರು. ಸಂತ ಗುರುನಾನಕರು- "ಸತ್ಯವೇ ನಿನ್ನ ಪ್ರವಾದಿ, ಸತ್ಯಧರ್ಮಗಳೇ ಪ್ರಾರ್ಥನೆ" ಎಂದರು. ಬಸವಣ್ಣನವರು- "ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ" ಎಂದು ಆಧ್ಯಾತ್ಮದ ಪರಿಕಲ್ಪನೆಯಲ್ಲಿ ಸತ್ಯವನ್ನು ಸರಳವಾಗಿ ವಿಶ್ಲೇಷಿಸಿದರು. ಗಾಂಧೀಜಿ ಅವರು ಸತ್ಯದೊಂದಿಗೆ ನಿರಂತರ ಮುಖಾಮುಖಿಯಾಗುತ್ತಾ, ಸತ್ಯಾನ್ವೇಷಕರಾದರು. ಅಹಿಂಸೆ, ಸಹನೆ, ಏಕಾಗ್ರತೆ, ಮೌನ, ಶ್ರದ್ಧೆ, ಕ್ಷಮೆ, ನಿಸ್ವಾರ್ಥ ಮತ್ತು ಸ್ವಾತಂತ್ರ್ಯದ ಮುಖಾಂತರ ಸತ್ಯದ ವಿಶ್ವರೂಪ ಮತ್ತು ಸತ್ಯ ಪರಿಪಾಲನೆಗಳನ್ನು ತೋರಿಸಿಕೊಟ್ಟರು. ಸತ್ಯ, ಅಸತ್ಯ, ಅರ್ಧಸತ್ಯ, ಹುಸಿಸತ್ಯ, ಸುಳ್ಳಿನ ಸತ್ಯದ ಮುಖವಾಡಗಳು ವಿಜೃಂಭಿಸುತ್ತಿರುವ ವರ್ತಮಾನದಲ್ಲಿ ಗಾಂಧೀಜಿ ಅವರ ಸತ್ಯಪಥಗಳು ಕೈದೀವಿಕೆಯಾಗಿ ನಮ್ಮನ್ನು ನ್ಯಾಯದ, ಪ್ರೇಮದ ಹಾದಿಯಲ್ಲಿ ನಡೆಸುತ್ತವೆ.

ಇಂದಿರಾ ಕೃಷ್ಣಪ್ಪ
ಗೌ. ಕಾರ್ಯದರ್ಶಿ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು